Impact Factor (SJIF): 6.126 E-ISSN: 2583-1615, P-ISSN: 3049-3498

International Journal of Research in Academic World

Received: 30/August/2025 IJRAW: 2025; 4(10):489-498 Accepted: 10/October/2025

# ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರು

**[*1]ಪ್ರೊ.ಲಿಂಗಪ್ಪ ಎಂ. ಗೋನಾಲ**

[*1]ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕನ್ನಡ ವಿಭಾಗ ಉಸ್ಮಾನಿಯಾ, ವಿಶ್ವವಿದ್ಯಾಲಯ, ಹೈದರಾಬಾದ, ತೆಲಂಗಾಣ, ಭಾರತ.

**ಸಾರಾಂಶ**

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರು ಎಂಬ ಸಮಸ್ಯೆಯನ್ನು ಈ ಸಂಶೋಧನಾ ಲೇಖನದಲ್ಲಿ ಚರ್ಚಿಸಲಾಗಿದೆ. ರಾಜ-ರಾಣಿಯರು, ಸೇವಕರು, ಪ್ರಜೆಗಳು, ಮಂತ್ರಿವರ್ಗ, ವೃತ್ತಿಗಳು, ಶಿಕ್ಷಣ, ಯುದ್ಧ, ಹಬ್ಬ-ಹರಿದಿನಗಳು, ದೇವರು, ಧರ್ಮದಾಚರಣೆ, ಜನನ, ಮರಣಗಳ ನಡುವಿನ ಮನುಷ್ಯ ಸಂಸ್ಕಾರಗಳು, ಚರಿತ್ರೆ, ಧಾರ್ಮಿಕತೆ ಸಮಾಜ, ಆರ್ಥಿಕತೆ, ನಿಸರ್ಗ, ಪಶು-ಪ್ರಾಣಿಗಳು, ಸರಿಸೃಪಗಳು, ದೇವತೆಗಳು, ದೇವಮಾನವರು, ಕಿನ್ನರ-ಕಿಂಪುರುಷರು, ಅಧಿಕಾರಿ, ಅಧೀನ ಅಧಿಕಾರಿ, ಶ್ರೇಣೀಕೃತ ಸಮಾಜದ ವ್ಯವಸ್ಥೆ, ಈ ಮುಂತಾದ ಸಂಗತಿಗಳನ್ನು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಆಯಾ ಸಂದರ್ಭಕ್ಕೆ ಅನುಗುಣವಾಗಿ ವರ್ಣಿತವಾಗಿವೆ. ಸಮಾಜದ ಮೂಲ ಮನುಷ್ಯ. ಮನುಷ್ಯನ ಪ್ರತಿಚಿತ್ರವೇ ಕೃತಿಪಾತ್ರ. ಕಾವ್ಯಗಳಲ್ಲಿ ಗಂಡು-ಹೆಣ್ಣು ಪಾತ್ರಗಳ ಚಿತ್ರಣವು ಬಂದಿವೆ. ಸೃಷ್ಟಿಯ ಮೂಲವೇ ಸ್ತ್ರೀ ಆದುದರಿಂದ ಹೆಣ್ಣನ್ನು ಸಾಹಿತ್ಯದಲ್ಲಿ ಹಲವು ಬಗೆಯಲ್ಲಿ ವರ್ಣಿಸಿರುವುದಿದೆ.

ಕನ್ನಡ ಕವಿಗಳು ಸಾಮಾನ್ಯವಾಗಿ ಪ್ರಾರ್ಥನೆ ಅಥವಾ ಪೀಠಿಕೆಯಲ್ಲಿ ಸ್ತ್ರೀ ದೇವತಾ ಸ್ತುತಿಯ ಮೂಲಕ ಕಾವ್ಯಾರಂಭ ಮಾಡುವರು. ಗೌರಿ, ಲಕ್ಷ್ಮೀ, ಸರಸ್ವತಿ, ಶಾರದೆ, ವಾಗ್ದೇವಿ ಹೆಸರುಗಳುಳ್ಳ ದೇವತಾ ಸ್ತುತಿಯನ್ನು ಕಾಣುವೆವು. ಆದರೆ ಅವರು ತಮ್ಮ ಕಾವ್ಯಗಳಲ್ಲಿ ಹಲವು ಬಗೆಯ ಮಹಿಳಾ ಪಾತ್ರಗಳನ್ನು, ಮಹಿಳಾ ಸಂವೇದನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಪುರಾದ ಪಾತರಗಳು, ರಾಣಿಯರು, ತಾಯಿ, ಮಗಳು, ಅಜ್ಜಿ, ದಾಸಿಯರು, ಸೇವಕಿಯರು, ವಾರಾಂಗನೆಯರು, ವೇಶ್ಯೆಯರು, ಸಂಗೀತಗಾರರು, ಗಾಯಕಿಯರು, ನರ್ತಕಿಯರು, ಅಲ್ಲದೆ ಐತಿಹಾಸಿಕ ಸಮಕಾಲೀನ ವ್ಯಕ್ತಿ ಚಿತ್ರಗಳನ್ನು ಕನ್ನಡ ಪ್ರಾಚೀನ ಕಾವ್ಯಗಳಲ್ಲಿ ಅವುಗಳ ಹಾವಾ-ಭಾವಾ—ಜೀವಾ ತುಂಬಿ ಸಜೀವ ಮನುಷ್ಯ ಮೌಲ್ಯಗಳನ್ನು ಬಿತ್ತರಿಸಿದ್ದಾರೆ. ಆ ಹಿನ್ನೆಲೆಯಲ್ಲಿ ವಡ್ಡಾರಾಧನೆಯಿಂದ ನಯಸೇನನವರೆಗೆ ಚಿತ್ರಿತವಾದ ಸ್ತ್ರೀಯರನ್ನು ಕುರಿತು ಚರ್ಚಿಸುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

**ಪ್ರಮುಖ ಪದ:** ಪ್ರಾಚೀನ ಕಾಲದ ಸ್ತ್ರೀಯರ ಸ್ಥಾನಮಾನವನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀಯರಿಗಿದ್ದ ಸಮಾಜದ ಕಟ್ಟುಪಾಡುಗಳು ಮತ್ತು ಸ್ವಾತಂತ್ರ್ಯ ಹೇಗಿತ್ತು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಸಾಮಾಜಿಕ, ಧಾರ್ಮಿಕ, ರಾಜಕೀಯ ಅಧಿಕಾರವನ್ನು ಸ್ತ್ರೀಯರು ಹೇಗೆ ನಿಭಾಯಿಸುತ್ತಿದ್ದರು ಅನ್ನುವುದು ತಿಳಿಯುವುದು.

**ಪರಿಚಯ**

ಪ್ರಾಚೀನ ಕನ್ನಡ ಸಾಹಿತ್ಯವನ್ನು ಕಾಲದ ದೃಷ್ಟಿಯಿಂದ, ಕವಿ ಮತ್ತು ಕೃತಿಗಳ ವಸ್ತು ವಿಷಯಗಳ ದೃಷ್ಟಿಯಿಂದ ಪರಿಶೀಲಿಸಿದರೆ, ಬಹಳ ವಿಶಾಲತೆಯುಳ್ಳದ್ದಾಗಿದೆ. ವಿಶೇಷವಾಗಿ, ವಿರಳ ಎನ್ನಬಹುದಾದ ಪೂರ್ಣಗದ್ಯ ಕೃತಿಗಳು ಮತ್ತು ಅಧಿಕವಾದ ಗದ್ಯ ಮಿಶ್ರಿತವಾದ ಚಂಪೂ ಕಾವ್ಯಗಳಿವೆ. ಶಿವಾಕೋಟ್ಯಾಚಾರ್ಯನ ವಡ್ಡಾರಾಧನೆ ಕೃತಿಯೊಂದು ಗದ್ಯದಲ್ಲಿ ಹತ್ತೊಂಬತ್ತು ಕಥೆಗಳನ್ನು ಒಳಗೊಂಡಿದೆ. ಪಂಪನ (940) ಆದಿಪುರಾಣ, ವಿಕ್ರಮಾರ್ಜುನ ವಿಜಯ; ಪೊನ್ನನ (950) ಶಾಂತಿಪುರಾಣ; ಚಾವುಂಡಾರಯನ (975) ಚಾವುಂಡರಾಯ ಪುರಾಣ (ಗದ್ಯ), ಒಂದನೆಯ ನಾಗವರ್ಮನ (990) ಕರ್ಣಾಟಕ ಕಾದಂಬರಿ, ರನ್ನನ (990) ಸಾಹಸಭೀಮ ವಿಜಯ, ಅಜಿತತೀರ್ಥಕರ ತಿಲಕ ಪುರಾಣ, ಚಾವುಂಡರಾಯನ (1024) ಲೋಕೋಪಕಾರ, ದುರ್ಗಸಿಂಹನ (1030) ಕರ್ಣಾಟಕ ಪಂಪಚಂತ್ರ, ಶಾಂತಿನಾಥನ (1070) ಸುಕುಮಾರ ಚರಿತ, ನಾಗಚಂದ್ರನ (ಅಭಿನವಪಂಪ) (1100) ಮಲ್ಲಿನಾಥ ಪುರಾಣ, ರಾಮಚಂದ್ರ ಚರಿತ ಪುರಾಣ, ನಯಸೇನನ (1100) ಧರ್ಮಾಮೃತ, ಬ್ರಹ್ಮಶಿವನ (1112) ಸಮಯ ಪರೀಕ್ಷೆ, ಕರ್ಣಪಾರ್ಯನ (1150) ನೇಮಿನಾಥ ಪುರಾಣ, ಎರಡನೆಯ ನಾಗವರ್ಮನ (1150) ವರ್ಧಮಾನ ಪುರಾಣ ಹೀಗೆ ಈ ಪ್ರಾಚೀನ ಕಾವ್ಯಗಳು ಚಂಪೂಕಾವ್ಯ ಪರಂಪರೆಯಲ್ಲಿ ಸೃಷ್ಟಿಕೊಂಡುವುಗಳಾಗಿವೆ. ಹೀಗಾಗಿ ಹತ್ತನೆಯ ಶತಮಾನದಿಂದ ಹನ್ನೆರಡನೆಯ ಶತಮಾನದ ಮಧ್ಯಕಾಲದವರೆಗೆ ಅಧಿಕ ಸಂಖ್ಯೆಯಲ್ಲಿ ಜೈನ ಕವಿ ಕಾವ್ಯಗಳ

*Corresponding Author: ಪ್ರೊ.ಲಿಂಗಪ್ಪ ಎಂ. ಗೋನಾಲ

ಸುಗ್ಗಿಯ ಕಾಲವದು. ಬೆರಳೆಣಿಕೆಯಷ್ಟು ಬ್ರಾಹ್ಮಣ ಕವಿ ಕೃತಿಗಳು ಮೈದೋರಿವೆ. ಮಾರ್ಗ ಸಂಪ್ರದಾಯದಲ್ಲಿ ರಚನೆಯಾಗಿರುವ ಕನ್ನಡ ಚಂಪೂಕಾವ್ಯಗಳಲ್ಲಿ ಮಹಾವಸ್ತು, ನಾಯಕ, ಪ್ರತಿನಾಯಕ, ಹದಿನೆಂಟು ವರ್ಣನೆಗಳು, ಸಂಸ್ಕೃತ ಮಿಶ್ರಿತ ಹಳಗನ್ನಡ ಭಾಷೆ, ರಸ ಪ್ರಾಧಾನ್ಯತೆ, ಅಲಂಕಾರ, ರೂಪಕ, ಪ್ರತಿಮೆ, ಉಪಮೆಗಳ ಸರಮಾಲೆ, ಅತಿಯಾದ ರಂಜನೆಯಾದ ಚಿತ್ರಕ ಮಾಂತ್ರಿಕ ಚಿತ್ರಣ ಗಂಭೀರ ಶೈಲಿ ಈ ಮುಂತಾದವುಗಳಿಂದ ಪ್ರಾಚೀನ ಕನ್ನಡ ಕಾವ್ಯಗಳು ಇಂದಿಗೂ ಅವುಗಳ ಮಹತ್ವವನ್ನು ಉಳಿಸಿಕೊಂಡಿವೆ. ಜೈನ ಕವಿಗಳು ರಾಜಾಶ್ರಯದಲ್ಲಿದ್ದು ಲೌಕಿಕ ಕಾವ್ಯವನ್ನು ಆಶ್ರಯದಾತನನ್ನು ಪುರಾಣ ಕಾವ್ಯಗಳ ನಾಯಕ ಪಾತ್ರಗಳೊಂದಿಗೆ ಮೇಳೈಸಿ ಬರೆದು ಋಣ ಭಾರವನ್ನು ಇಳಿಸುವ ಪ್ರಯತ್ನ ಮಾಡಿದರು. ತಮ್ಮ ಧರ್ಮದ ಋಣ ಭಾರಕ್ಕಾಗಿ ಧಾರ್ಮಿಕ ಪುರಾಣ ಕಾವ್ಯಗಳನ್ನು ಬರೆದರು. ಆದರೆ ಎಲ್ಲ ಕವಿಗಳು ಹೀಗೆಯೇ ಬರೆದರೆಂದು ಹೇಳಲಾಗುವುದಿಲ್ಲ. ಒಟ್ಟಿನಲ್ಲಿ ಜೈನಧರ್ಮದ ಪ್ರಚಾರ, ಪ್ರಸಾರದ ದೃಷ್ಟಿಯನ್ನಿಟ್ಟುಕೊಂಡಿದ್ದ ಕವಿಗಳು ಧರ್ಮದ ಮೂಲ ಧ್ಯೇಯೋದ್ದೇಶಗಳನ್ನು, ಉಪದೇಶಗಳನ್ನು, ಧರ್ಮದಾಚರಣೆಗಳನ್ನು, ಧರ್ಮ ಸಂಸ್ಕಾರವನ್ನು ಸಮಾಜಕ್ಕೆ ನೀಡುವ ಕಾರ್ಯವನ್ನು ತಮ್ಮ ಕೃತಿಗಳ ಮೂಲಕ ಮಾಡಿದರು.

ರಾಜ-ರಾಣಿಯರು, ಸೇವಕರು, ಪ್ರಜೆಗಳು, ಮಂತ್ರಿವರ್ಗ, ವೃತ್ತಿಗಳು, ಶಿಕ್ಷಣ, ಯುದ್ಧ, ಹಬ್ಬ-ಹರಿದಿನಗಳು, ದೇವರು, ಧರ್ಮದಾಚರಣೆ, ಜನನ, ಮರಣಗಳ ನಡುವಿನ ಮನುಷ್ಯ ಸಂಸ್ಕಾರಗಳು, ಚರಿತ್ರೆ, ಧಾರ್ಮಿಕತೆ, ಸಮಾಜ, ಆರ್ಥಿಕತೆ, ನಿಸರ್ಗ, ಪಶುಪ್ರಾಣಿ, ಸರಿಸೃಪಗಳು, ದೇವತೆಗಳು, ದೇವಮಾನವರು, ಕಿನ್ನರ-ಕಿಂಪುರುಷರು, ಅಧಿಕಾರಿ, ಅಧೀನ ಅಧಿಕಾರಿ, ಶ್ರೇಣಿಕೃತ ಸಮಾಜದ ವ್ಯವಸ್ಥೆ, ಈ ಮುಂತಾದ ಸಂಗತಿಗಳನ್ನು ಕಾವ್ಯಗಳಲ್ಲಿ ಆಯಾ ಸಂದರ್ಭಕ್ಕನುಗುಣವಾಗಿ ವರ್ಣಿತವಾಗಿವೆ. ಸಮಾಜದ ಮೂಲ ಮನುಷ್ಯ. ಮನುಷ್ಯನ ಪ್ರತಿಚಿತ್ರವೇ ಕೃತಿಪಾತ್ರ. ಕಾವ್ಯಗಳಲ್ಲಿ ಗಂಡು-ಹೆಣ್ಣು ಪಾತ್ರಗಳ ಚಿತ್ರಣವು ಬರುವುದು ಸಹಜ. ಸೃಷ್ಟಿಯ ಮೂಲವೇ ಸ್ತ್ರೀ. ಆದುದರಿಂದ ಹೆಣ್ಣನ್ನು ಸಾಹಿತ್ಯದಲ್ಲಿ ಹಲವು ಬಗೆಯಲ್ಲಿ ವರ್ಣಿಸಿರುವುದಿದೆ.

ಕನ್ನಡ ಕವಿಗಳು ಸಾಮಾನ್ಯವಾಗಿ ಪ್ರಾರ್ಥನೆ ಅಥವಾ ಪೀಠಿಕೆಯಲ್ಲಿ ಸ್ತ್ರೀದೇವತಾಸ್ತುತಿಯ ಮೂಲಕ ಕಾವ್ಯಾರಂಭ ಮಾಡುವರು. ಗೌರಿ, ಲಕ್ಷ್ಮೀ, ಸರಸ್ವತಿ, ಶಾರದೆ, ವಾಗ್ದೇವಿ ಹೆಸರುಗಳುಳ್ಳ ದೇವತಾಸ್ತುತಿಯನ್ನು ಕಾಣುವೆವು. ಆದರೆ ಅವರು ತಮ್ಮ ಕಾವ್ಯಗಳಲ್ಲಿ ಹಲವು ಬಗೆಯ ಮಹಿಳಾ ಪಾತ್ರಗಳನ್ನು, ಮಹಿಳಾ ಸಂವೇದನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಪುರಾಣದ ಪಾತ್ರಗಳು, ರಾಣಿಯರು, ತಾಯಿ, ಮಗಳು, ಅಜ್ಜಿ, ದಾಸಿಯರು, ಸೇವಕಿಯರು, ವಾರಾಂಗನೆಯರು, ವೇಶ್ಯೆಯರು, ಸಂಗೀತಗಾರರು, ಗಾಯಕಿಯರು, ನೃತ್ಯಕಾರ್ತಿಯರು ಅಲ್ಲದೆ ಐತಿಹಾಸಿಕ ಸಮಕಾಲೀನ ವ್ಯಕ್ತಿ ಚಿತ್ರಗಳನ್ನು ತಮ್ಮ ಕಾವ್ಯ ಕುಲುಮೆಗಳಲ್ಲಿ ಎರಕ ಹೊಯ್ದು ಹಾವ-ಭಾವ-ಜೀವ ತುಂಬಿ ಸಜೀವ ಮನುಷ್ಯ ಮೌಲ್ಯಗಳನ್ನು ಬಿತ್ತರಿಸಿದ್ದಾರೆ. ಆ ಹಿನ್ನೆಲೆಯಲ್ಲಿ ಪಂಪನಿಂದ ನಯಸೇನನವರಗೆ ಚಿತ್ರಿತವಾದ ಮಹಿಳಾಮಣಿಗಳನ್ನು ಕುರಿತು ಚರ್ಚಿಸಲಾಗಿದೆ.

## ವಡ್ಡಾರಾಧನೆಯಲ್ಲಿ ಸ್ತ್ರೀಯರು

ಕನ್ನಡದ ಲಭ್ಯವಾಗಿರುವ ಮೊಟ್ಟ ಮೊದಲ ಗದ್ಯಗ್ರಂಥ ಶಿವಾಕೋಟ್ಯಾಚಾರ್ಯರ ವಡ್ಡಾರಾಧನೆಯಾಗಿದೆ. ಇದರಲ್ಲಿ ಹತ್ತೊಂಬತ್ತು ಜೈನ ಕಥೆಗಳಿವೆ. ಸುಕುಮಾರಸ್ವಾಮಿಯ ಕಥೆ, ಸುಕೌಶಳಸ್ವಾಮಿಯ ಕಥೆ, ಗಜಕುಮಾರನ ಕಥೆ, ಸನತ್ಕುಮಾರ ಚಕ್ರವರ್ತಿಯ ಕಥೆ, ಅಣ್ಣಿಕಾ ಪುತ್ರನ ಕಥೆ, ಭದ್ರಬಾಹು ಭಟ್ಟಾರರ ಕಥೆ, ಲಲಿತ ಘಟೆಯ ಕಥೆ, ಧರ್ಮಘೋಷ ಭಟಾರರ ಕಥೆ, ಸಿರಿದಿಣ್ಣನೆಂಬ ರಿಷಿಯ ಕಥೆ, ವೃಷಭಸೇನ ಭಟಾರರ ಕಥೆ, ಕಾರ್ತಿಕ ಋಷಿಯ ಕಥೆ, ಅಭಯಘೋಷ ಮುನಿಯ ಕಥೆ, ವಿದ್ಯುಚ್ಚೋರನೆಂಬ ರಿಸಿಯ ಕಥೆ, ಗುರುದತ್ತ ಭಟಾರರ ಕಥೆ, ಚಿಲಾತ ಪುತ್ರನ ಕಥೆ, ದಂಡಕನೆಂಬ ರಿಸಿಯ ಕಥೆ, ಮಹೇಂದ್ರದತ್ತಾಚಾರ್ಯರ್ ಮೊದಲಾದ ಐನೂರ್ವರ್ ರಿಸಿಯರ್ಕಳ ಕಥೆ, ಚಾಣಾಕ್ಯ ರಿಸಿಯ ಕಥೆ, ವೃಷಭಸೇನರೆಂಬ ರಿಸಿಯ ಕಥೆ ಈ ಹತ್ತೊಂಬತ್ತು ಕಥೆಗಳು ಜೈನಧರ್ಮವನ್ನು, ಯತಿಗಳನ್ನು ನಿಂದಿಸಿದರೆ, ಹಿಂಸೆಯನ್ನು ಮಾಡಿದರೆ, ದುಷ್ಟವಿಚಾರ ಹೊಂದಿದರೆ ಜೀವಿಯು ಭವಭವಾಂತರಗಳಲ್ಲಿ ನಾನಾ ಪಶು-ಪ್ರಾಣಿಗಳಾಗಿ ಅದರ ಕಷ್ಟಫಲಗಳನ್ನು ಅನುಭವಿಸಬೇಕಾಗುತ್ತದೆಂದು ಕಥಾ ಪಾತ್ರಗಳ ಉದಾಹರಣಾರ್ಥವಾಗಿ ಪಾಪದ ಭೀಕರತೆಯನ್ನು ಬಿಚ್ಚಿ ತೋರಿಸುವುವು. ಜೀವಿಯು ಧರ್ಮಮಾರ್ಗದಲ್ಲಿ ನಡೆದರೆ ಪುಣ್ಯಫಲ ಪ್ರಾಪ್ತಿಯಾಗಿ ಭವನಾಶವಾಗಿ ಮೋಕ್ಷ ಹೊಂದುವುದಾಗಿ ಮನವರಿಕೆ ಮಾಡಿಕೊಡುತ್ತವೆ. ಗಂಡಾಗಲಿ, ಹೆಣ್ಣಾಗಲಿ ಧರ್ಮದ ದಾರಿಗೆ ಲಿಂಗ ಭಿನ್ನತೆಯಿಲ್ಲದೆ ಸಮವೆಂದು ಉಪದೇಶಿಸವಿದೆ.

ಸಾಮಾನ್ಯವಾಗಿ ಈ ಕಥೆಗಳು ಜಂಬೂದ್ವೀಪದ ಯಾವುದಾರೊಂದು ನಾಡಿನ ನಗರ ಇಲ್ಲವೆ ಪಟ್ಟಣದಲ್ಲಿ ಆರಂಭವಾಗುವುವು. ಸುತ್ತಮುತ್ತಲಿನ ಪ್ರದೇಶಗಳಿಗೆ ಪಾತ್ರಗಳು, ಮುನಿಪಾತ್ರಗಳು ಸಂಚರಿಸುವ ಮೂಲಕ ಕಥಾಹಂದರವು ವಿಸ್ತರಿಸುವುದು. ಕಥೆಗಳಲ್ಲಿ ರಾಜ-ರಾಣಿ, ಮಕ್ಕಳು, ಮಂತ್ರಿ, ಅವನ ಸತಿ, ತಳವಾರ, ಜೋತಿಷಿಗಳು, ಜೈನಮುನಿಗಳು ಮತ್ತು ಪ್ರಜೆಗಳು ಇರುವುದು ಸಹಜ. ಇವರುಗಳಲ್ಲಿ ರಾಣಿಯರ ವರ್ಣನೆ ಎಲ್ಲ ಕಥೆಗಳಲ್ಲಿ ಹೆಚ್ಚು ಕಡಿಮೆ ಒಂದೇ ತೆರನಾಗಿರುತ್ತದೆ. ಸುಕುಮಾರ ಸ್ವಾಮಿಯ ಕಥೆಯಲ್ಲಿ ರಾಣಿಯ ವರ್ಣನೆ ಹೀಗಿದೆ. "ಜಂಬೂದ್ವೀಪದ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಸಂಬಿಯೆಂಬುದು ಪೊಳಲದನಾಳ್ವೊನತಿಬಳನೆಂಬರಸನಾತನ ಮಹಾದೇವಿ ಮನೋಹರಿಯೆಂಬೊಳ್ ಪೆಸರ್ಗೆ ತಕ್ಕಂತೆ ನೋಡಿದವರೆಲ್ಲರ ಕಣ್ಣಾಲಿಗೆ ಸೊಗಯಿಸುವಳ್ ಸತ್ಯಶೌಚಾಚಾರಂಗಳಿಂ ಕೂಡಿದೊಳ್ ಅತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿ ಹಾವಭಾವ ವಿಲಾಸ ವಿಭ್ರಮಂಆಳನೊಡೆಯಳಂತರ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಅರಸನ ಮಂತ್ರಿ ಸೋಮಶರ್ಮನೆಂಬೊನಾತನ ಭಾರ್ಯೆ ಕಾಶ್ಯಪಿಯೆಂಬೊಳ್" (ಪು.8, ಸುಕುಮಾರಸ್ವಾಮಿಯ ಕಥೆ) ಹೀಗೆ ಇಲ್ಲಿ ರಾಣಿಯ ಹೆಸರು ಮನೋಹರಿ. ಹೆಸರಿಗೆ ತಕ್ಕಂತೆ ಸುಂದರವಾಗಿದ್ದಳು. ಸತ್ಯಶುದ್ಧಾಚಾರಗಳನ್ನುಳ್ಳ ಅತ್ಯಂತ ರೂಪ ಲಾವಣ್ಯ ಸೌಭಾಗ್ಯಕಾಂತಿ ಹಾವಭಾವ ವಿಲಾಸ ವಿಭ್ರಮಗಳಿಂದ ಕೂಡಿದ್ದಳು. ಅವರಿಗೆ ಇಷ್ಟವಾದ ಕಾಮಭೋಗಗಳನ್ನು ಅನುಭವಿಸುತ್ತಿದ್ದರು. ಅವರಲ್ಲಿರುವ ಸೋಮಶರ್ಮನೆಂಬ ಮಂತ್ರಿಗೆ ಕಾಶ್ಯಪಿ ಎಂಬ ಸತಿಯಿದ್ದಳೆಂದು ಹೀಗೆ ಕಥೆ ಮುಂದುವರೆಯುವುದು. ಆದರೆ ಈ ರಾಣಿ ಮತ್ತೆ ಎಲ್ಲಿಯೂ ಪುನಃ ಕಾಣಿಸಿಕೊಳ್ಳುವುದಿಲ್ಲ. ಕಾಶ್ಯಪಿ ಮಾತ್ರ ಅವಳ ಗಂಡ ಸೋಮಶರ್ಮ ಕಾಲವಾದ ಮೇಲೆ ತನ್ನ ಮಕ್ಕಳು ಸಪ್ತವ್ಯಸನಿಗಳೆಂದು ತಿಳಿದು ರಾಜ ಅವರಿಗೆ ಮಂತ್ರಿ ಪದವಿಯನ್ನು ನಿರಾಕರಿಸಿದಾಗ, ಅವಳು ಅಗ್ನಿಭೂತಿ ಮತ್ತು ವಾಯುಭೂತಿಯರನ್ನು ತನ್ನ ಅಣ್ಣನಾದ ಸೂರ್ಯಮಿತ್ರನಲ್ಲಿಗೆ ಕಳುಹಿಸುವಾಗ ಪತ್ರ ಬರೆದು ಕೊಡುವಲ್ಲಿಗೆ ಪಯಣ ನಿಲ್ಲುವುದು. ಹೆಸರಿಗೆ ಮಾತ್ರ ಪ್ರಮುಖ ಪಾತ್ರಗಳಂತೆ ಇವು ಕಂಡು ಬರುತ್ತವೆ. ಕಥಾ ಬಿತ್ತಿಯ ಮಧ್ಯೆದಲ್ಲಿ ಬರುವ ಮಹಿಳೆಯರು ಭವಾವಳಿಯ ಭವಾಂತರದಲ್ಲಿ ಒಂದೊಂದು ಜನ್ಮದಲ್ಲಿ ಒಂದೊಂದೊ ಹೆಸರಿನಲ್ಲಿ ಕಾಣಿಸಿಕೊಂಡು ಮುಂದೊಂದು ಪಾತ್ರದಲ್ಲಿ ಬರುವ ಮೂಲಕ ಕಥೆಯ ವಿಷಯ ಸಾಗುವುದು. ಜೈನಕಥೆಗಳು ನೇರವಾಗಿ ಒಂದು ಸರಳ ನಿರೂಪಣೆಯವಲ್ಲ. ಅವು ಕಥೆಗಳೊಳಗೆ ಕಥೆಗಳ ಸುರಳಿಯನ್ನು

ಬಿಚ್ಚಿಕೊಳ್ಳುವ ಕಥಾಗುಚ್ಛಗಳು. ಒಂದು ಕಥೆಯಲ್ಲಿ ಹಲವು ಉಪಕಥೆಗಳು ಬರುವಾಗ ಯಾವ ಪಾತ್ರವಾದರು ಕೂಡ ಆ ಕಥೆ ಮುಗಿದ ಮೇಲೆ ಅಲ್ಲಿಂದ ಕಾಣೆಯಾಗುವುದು. ಆದರೆ ಭವಾಂತರಗಳಿಂದ ಪಾತ್ರಗಳು ಮುಂದುವರೆಯುತ್ತವೆ. ಹಾಗೆ ನೋಡಿದರೆ ಈ ಕಥೆಯಲ್ಲಿ ವಾಯುಭೂತಿಯೇ ತಾನು ಹಿಂದೆ ಮಾಡಿದ ಪಾಪದ ಫಲವಾಗಿ ಮುಂದಿನ ಭವಗಳಲ್ಲಿ ನಾಯಿ, ಹಂದಿ, ಕುರುಡಿಯಾಗಿ ಹುಟ್ಟುವನು. ಧರ್ಮಸಂಕಲ್ಪದ ಫಲವಾಗಿ ನಾಗಶ್ರೀಯಾಗಿ ಹುಟ್ಟುವನು. ನಾಗಶ್ರೀಯು ಸೂರ್ಯಮಿತ್ರಾಚಾರ್ಯ ಮತ್ತು ಅಗ್ನಿಭೂತಿಮುನಿಗಳಿಂದ ಪಂಚಾಣುವ್ರತವನ್ನು ಸ್ವೀಕರಿಸುವಳು. ಅವಳ ಸ್ನೇಹಿತರಿಂದ ಈ ವಿಷಯವನ್ನು ಅವಳ ತಂದೆ ತಿಳಿದು, ಜಾತಿಗಳಲ್ಲಿ ಬ್ರಾಹ್ಮಣ ಜಾತಿಯೇ ಶ್ರೇಷ್ಠವಾಗಿರುವುದು. ಸವಣರ ವ್ರತವನ್ನು ಬಿಟ್ಟು ಬಿಡೆನ್ನುವನು. ಸವರಣರಲ್ಲಿಗೆ ಹೋಗಿಯೇ ಇವುಗಳನ್ನು ಬಿಡಬೇಕೆನ್ನುವಳು. ಆಗ ದಾರಿಯ ನಡುವೆ ನಡೆಯುವ ಪ್ರಸಂಗಗಳಿಗೊಂದೊಂದು ಉಪಕಥೆಗಳು ಬರುವವು. ಅವುಗಳಲ್ಲಿ ಕನ್ಯೆಯಕಥೆಯಲ್ಲಿ ಸುಮತಿಯು ತಳವಾರನ ಮಗಳು. ಇವಳು ಕಳ್ಳನನ್ನು ಕಂಡುಹಿಡಿಯಲು ಕಥೆ ಹೇಳುವಳು. ಆ ಮೂಲಕ ಕಳ್ಳನನ್ನು ಹಿಡಿದು ಕೊಡುವಳು. ಮಹಿಳೆಯು ಚತುರೆಯಾಗಿದ್ದಳು, ಸ್ವತಂತ್ರ ಆಲೋಚನೆ ಮಾಡುವಳಾಗಿದ್ದಳು ಎಂಬ ವಿಷಯವನ್ನು ಕಥೆಗಾರ ಈ ಪಾತ್ರದ ಮೂಲಕ ಓದಗರಿಗೆ ಮನವರಿಕೆ ಮಾಡುವನು. ಸುಮತಿ ಹೇಳುವ ಕತೆಯಲ್ಲಿ ಸಧಾಮೆ ಎಂಬ ತರುಣಿಯ ಪಾತ್ರ ಬರುವುದು. ಅವಳು ತನ್ನ ಹುಡುಗಾಟದಲ್ಲಿ ಸಂಕಷ್ಟಕ್ಕೆ ಸಿಕ್ಕಿಕೊಂಡಾಗ, ಅವಳ ಭಾವ ಅವಳಿಗೆ ಸಹಾಯ ಮಾಡಿದ್ದಕ್ಕೆ ನೀನು ಏನು ಬೇಡುತ್ತಿ ಬೇಡು ಕೊಡುವುದಾಗಿ ಕೇಳಿರುತ್ತಾಳೆ. ಅದಕ್ಕೆ ಅವನು ಅವಳ ಮದುವೆಯ ಅಲಂಕಾರವನ್ನು ತೋರಿಸಲು ಕೇಳಿಕೊಂಡಿರುತ್ತಾನೆ. ಮುಂದೊಂದು ದಿನ ಅವಳ ಮದುವೆಯ ಸಮಯದಲ್ಲಿ ಅಲಂಕಾರ ಮಾಡಿಕೊಂಡು ರಾತ್ರಿಯಲ್ಲಿ ತಳಾರ, ಕಳ್ಳ, ರಾಕ್ಷಸ ಈ ಮುಂತಾದವರ ಕಾಟಕ್ಕೆ ತಾನು ಪುನಃ ಮರಳಿ ಬರುವೆನೆಂದು ಭಾಷೆಕೊಟ್ಟು; ತನ್ನ ಅಲಂಕಾರವನ್ನು ತನ್ನ ಭಾವನಿಗೆ ತೋರಿಸುವಳು. ಆ ಸಮಯದಲ್ಲಿ ಅವನು ನೋಡಿ ಕಳವಳಗೊಳ್ಳುವನು. ತಮಾಷೆಗೆ ಹೇಳಿದ ಮಾತಿಗೆ ನೀನು ನಿಜವಾಗಿಯೇ ಹೀಗೆ ಬಂದಿಯಲ್ಲವೆಂದು ಹೇಳಿ ಕಳುಹಿಸುವನು. ತನ್ನ ಮಾತಿನಂತೆ ದಾರಿಯಲ್ಲಿ ಅಡ್ಡಿಪಡಿಸಿದ ತಳಾರ, ಕಳ್ಳ, ರಾಕ್ಷಸರಲ್ಲಿಗೆ ಇವಳು ಹೋಗಿ ನಿಮ್ಮ ಇಷ್ಟದಂತೆ ಮಾಡಿರೆಂದಾಗ; ಇವಳ ಸತ್ಯಶುದ್ಧತೆ ಮೆಚ್ಚಿ ಮನಸಾರೆ ಅವಳನ್ನು ಪ್ರಶಂಸಿ ಕಳುಹಿಸುವರು. ಇದರಿಂದ ತಿಳಿಯುವುದೇನೆಂದರೆ, ಕೊಟ್ಟಮಾತು ಅಥವಾ ಭಾಷೆ, ಪ್ರಮಾಣವನ್ನು ಮೀರಬಾರದೆಂಬ ಮೌಲ್ಯ ಈ ಪಾತ್ರದಲ್ಲಿ ಕಥೆಗಾರ ನೆಲೆಗೊಳಿಸಿರುವನು. ಅಷ್ಟೇ ಅಲ್ಲದೆ ಸ್ತ್ರೀಯನ್ನು ಗೌರದಿಂದ ನಡೆಯಿಸಿಕೊಳ್ಳಬೇಕೆಂದು ಕೂಡ ಸಂದೇಶವಿದೆ. ಸತ್ಯ, ಪ್ರಾಮಾಣಿಕತೆ ಮತ್ತು ಅಹಿಂಸಾ ತತ್ವಗಳನ್ನು ಸ್ತ್ರೀಪಾತ್ರದಲ್ಲಿ ತುಂಬಿದ್ದರೂ, ಅರ್ಧರಾತ್ರಿಯಲ್ಲಿ ಅವಳನ್ನು ಸುತ್ತಾಡಿಸಿದ್ದು ಸರಿ ಅನಿಸುವುದಿಲ್ಲ.

ಸಮಯ ಬಂದರೆ ಧೈರ್ಯ ತಂದುಕೊಳ್ಳಬೇಕು. ಉಪಾಯ ಮಾಡಿಯಾದರೂ ಅಪಾಯದಿಂದ ತಪ್ಪಸಿಕೊಳ್ಳಬೇಕೆಂದು ಗಂಭೀರೆ ಎಂಬ ಮುದುಕಿಯ ಕಥೆಯಲ್ಲಿದೆ. ಅವಳು ತನ್ನ ಮೊಮ್ಮಗಳೂರಿಗೆ ಹೋಗುವಾಗ ಕಳ್ಳರು ಇವಳಲ್ಲಿರುವುದನ್ನು ಲೂಟಿ ಮಾಡಲು ಸಂಚು ಹಾಕುವಾಗ, ಅವರಲ್ಲಿಯೇ ಒಬ್ಬನನ್ನು ತಬ್ಬಿಕೊಂಡು ನಿನ್ನಂತೆ ನನ್ನ ಮಗನಿದ್ದ. ಅವನು ಮನೆಬಿಟ್ಟು ಹೋಗಿದ್ದಾನೆ. ಅವನೇ ಬಂದಂತಾಯಿತು ಮಗನೇ ಎಂದು ಅತ್ತು, ಅವರನ್ನು ಮನೆಗೆ ಕರೆದುಕೊಂಡು ಹೋಗಿ ಅವರಿಗೆ ಮೋಸ ಮಾಡುವಲ್ಲಿ ಅವಳ ಚಾಣಕ್ಷತನವನ್ನು ಮೆಚ್ಚಿಕೊಳ್ಳುವಂತಹದ್ದು.

ಸೂರದತ್ತ ಸೆಟ್ಟಿಯ ಹೆಂಡತಿ ಯಶೋಭದ್ರೆ. ಇವರ ಮಗನೇ ಸುಕುಮಾರ. ಇವನ ಐಭೋಗ ಇಂದ್ರನಿಗೆ ಸಮವಾದದ್ದು. ಇವನಿಗೆ 32 ಜನ ಹೆಂಡತಿಯರು. ಅವನ ತಾಯಿ ರತ್ನಗಂಬಳಿಯನ್ನು ಖರೀದಿಸಿ 32 ತುಂಡುಗಳನ್ನಾಗಿಸಿ, ತನ್ನ ಸೊಸೆಯಂದಿರ ಚಪ್ಪಲಿಯ ಉಂಗುಟಕ್ಕೆ ಸಿಕ್ಕಿಸಿಕೊಳ್ಳಲು ಕೊಡುವಳು. ಈ ವಿಷಯ ತಿಳಿದು ಆ ನಾಡಿನ ಅರಸ ಸುಕುಮಾರನ ಐಭೋಗ ನೋಡಿ ಆಶ್ಚರ್ಯನಾಗಿ ವೈರಾಗ್ಯ ತಾಳುವನು. ಸುಕುಮಾರನ ಹುಟ್ಟಿದಾಕ್ಷಣ ಅವನ ತಂದೆ ಜೈನಯತಿಗಳನ್ನು ನೋಡಿ ವೈರಾಗ್ಯ ಹೊಂದಿ ಅವರೊಂದಿಗೆ ಹೋದಾಗಿನಿಂದ, ಯಶೋಭದ್ರೆಯು ಇವನನ್ನು ಬಹಳ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದಳು. ಒಬ್ಬ ತಾಯಿ ಪಾಲನೆ–ಪೋಷಣೆ, ಮಗನ ಭವಿಷ್ಯದ ಕುರಿತಾದ ದೂರದೃಷ್ಟಿತತ್ವವನ್ನು ಇವಳಲ್ಲಿ ಕಾಣುವೆವು. ಮೂರು ದಿನ ಆಯುಷ್ಯಯಿರುವಾಗ ಸುಕುಮಾರನು ಜೈನ ಯತಿಗಳನ್ನು ಕಂಡು ಘೋರ ತಪ್ಪಸ್ಸು ಮಾಡಿ ಮೋಕ್ಷ ಹೊಂದಿದನೆಂದು ಕಥೆ ಮುಕ್ತಾಯವಾಗುವುದು. ಆದರೆ ಸುಕುಮಾರ ಬರಿಯ ಕಾಲಿನಲ್ಲಿ ಅರಣ್ಯದಲ್ಲಿ ನಡೆದುಕೊಂಡು ಹೋಗುವಾಗ ಅವನ ಕಾಲಿನಿಂದ ಸೋರಿದ ರಕ್ತದ ವಾಸನೆ ಹಿಡಿದು, ಹಿಂದಿನ ಜನ್ಮದಲ್ಲಿ ಅವನ ಅತ್ತಿಗೆಯಾಗಿದ್ದ ಸೋಮದತ್ತೆಯು ಭವಾಂತರದಲ್ಲಿ ಸುತ್ತಿ ನರಿಯಾಗಿ ಜನ್ಮತಳೆದು ತನ್ನ ಮಕ್ಕಳೊಂದಿಗೆ ಬಂದು ತಪ್ಪಸ್ಸಿನಲ್ಲಿದ್ದ ಸುಕುಮಾರನ ಕಾಲು, ಹೊಟ್ಟೆ ಬಗೆದು ತಿನ್ನುವ ಪ್ರಸಂಗ ಕರುಣಾಜನಕವಾಗಿದೆ. ಇವನನ್ನು ಹುಡುಕುತ್ತ ತಾಯಿ ಯಶೋಭದ್ರೆ, 32ಜನ ಹೆಂಡಂದಿರು ಅಳುತ್ತ ಕಾಡಿನಲ್ಲಿ ಅಲೆಅಲೆದು ಬಂದು ಸುಕುಮಾರಸ್ವಾಮಿಯ ಕಳೇಬರವನ್ನು ನೋಡಿ ದುಃಖಿಸುವ ಬಗೆ ಮಗನನ್ನು ಕಳೆದುಕೊಂಡ ತಾಯಿಯ ನೋವು, ಪತಿಯನ್ನು ಕಳೆದುಕೊಂಡ ಸತಿಯರ ನೋವು ಶೋಕದ ಕಳಕಳವಾಗಿದೆಂದು ವರ್ಣಿಸಿರುವುದು ಮನಕರಗುವಂತಿದೆ.

ಸುಕೌಶಳ ಸ್ವಾಮಿಯ ಕಥೆ "ಈ ಜಂಬೂದ್ವೀಪದ ದಕ್ಷಿಣಭರತದಳಂಗಳಮೆಂಬುದು ನಾಡಲ್ಲಿ ಚಂಪಾ ನಗರಮೆಂಬುದು ಪೊಳಲದನಾಳ್ವೊಂ ಗಂಧಭಾಜನನೆಂಬರಸಂ ಇಂದ್ರನೊಳೋರಂತಪ್ಪ ಭೋಗೈಶ್ವರ್ಯ ವಿಭಮಮನೊಡೆಯೊಂ ನ್ಯಾಯದಿಂದಂ ಪ್ರಜೆಗಳಂ ಪ್ರತಿಪಾಳಿಸುವೊನಧಿಗಮ" (ಪು.59 ಸುಕೌಶಳಸ್ವಾಮಿಯ ಕಥೆ) ಈತನು ಸಹಸ್ರಕೂಟವೆಂಬ ಜಿನಮಂದಿರವನ್ನು ಕಟ್ಟಿಸಿದನು. ಆ ಜಿನಮಂದಿರಕ್ಕೆ ಪ್ರತಿದಿನಲೂ ಮಹಾಪೂಜೆ, ಅಭಿಷೇಕಗಳನ್ನು ಮಾಡಿಸುತ್ತಿದ್ದನು. ಆ ಪಟ್ಟಣದಲ್ಲಿ ಸಾಗರದತ್ತನೆಂಬ ಸೆಟ್ಟಿಯಿದ್ದನು. ಆತನಿಗೆ ಸುಭದ್ರೆ ಎನ್ನುವ ಸತಿಯಿದ್ದಳು. ಅವರಿಗೆ ಸರೂಪೆ ಎಂಬ ಮಗಳಿದ್ದಳು. ಇವಳನ್ನು ಆ ಪಟ್ಟಣದ ನಾಗದತ್ತನೆಂಬ ಸೆಟ್ಟಿಗೆ ಕೊಟ್ಟು ವಿವಾಹ ಮಾಡಿದರು. ಅವರಿಬ್ಬರಿಗೆ ಸುಕೇಶಿನಿ ಎನ್ನುವ ಮಗಳು ಹುಟ್ಟಿದಳು. ಅವಳು ಬೆಳೆದು ಅತ್ಯಂತ ರೂಪಲಾವಣ್ಯ ಸೌಭಾಗ್ಯಕಾಂತಿ ಹಾವಭಾವ ವಿಲಾಸವಿಭ್ರಮಂಗಳನೊಡೆಯೊಳ್ ಪಲವುಂ ತೆರದ ಶುಭಲಕ್ಷಣಂಗಳಿಂದಂ ಕೂಡಿದಮೆಯ್ಯನೊಡೆಯೊಳ್ ನವಯೌವನೆ ದೇವಗಣಿಕೆಯನೆ ಪೋಲ್ವಳೊಂದು ದಿವಸಂ ಅಷ್ಟಮಿಯಂ ನೋಂತು ದೇವರನರ್ಚಿಸಲೆಂದು ಸಹಸ್ರಕೂಟಚೈತಾನ್ಯಲಯಕ್ಕರ್ಚನೆಯಂ ಕೊಂಡು ಪೋದಳನ್ನೆಗಮರಸನುಮಾಗಳೆ ದೇವರಂ ಬಂದಿಸಲ್ ಬಂದೊಡರಸಂಗೆ ನಾಣ್ಚಿ ಬಸದಿಯೊಳಗಣ ಕಂಬದ ಮರೆಯೊಳ್ ಕೇರಂ ಸಾರ್ದು ಪೊನ್ನ ಬೆಳಗುವ ಗಳಂತಿಗೆಯಾದಮಾನುಮೊಪ್ಪುತ್ತಿರ್ದುದಂ ಪಿಡಿದು ನಿಂದಿರ್ದೊಳರಸಂ ಕಂಡಿಲ್ಲಿಯ ಚಿತ್ರದಲೆಪ್ಪದ ಕಾಷ್ಠಕರ್ಮದ ರೂಪುಗಳೊಳೆಲ್ಲಮೀ ಸ್ತ್ರೀಯ ಜೀವವಿದ್ಧಮಿಂತುಟತಿಶಯಮೆಂದರಸನಾಕೆಯ ರೂಪಿಂಗಚ್ಚರಿವಟ್ಟು

ಪೊಗಳೆ" (ಪು.60, ಸುಕೌಶಳಸ್ವಾಮಿಯ ಕಥೆ) ಹೀಗೆ ಆಕಸ್ಮಿಕವಾಗಿ ಗಂಧಭಾಜನರಾಜನು ಇವಳ ರೂಪಲಾವಣ್ಯ ಸೌಂದರ್ಯವನ್ನು ನೋಡಿ, ಇಲ್ಲಿ ಚಿತ್ರಿಸಿರುವ ಲೇಪ್ಯವಸ್ತುಗಳಿಂದ, ಮರಗೆಲಸದಿಂದ ಮಾಡಿರುವ ಗೊಂಬೆಯ ರೂಪಗಳೆಲ್ಲಲ್ಲ ಈ ಹೆಣ್ಣಿನ ಸಜೀವವೆನಿಸುವ ಶಿಲ್ಪದ ಮೂರ್ತಿ ಬಹಳ ಶ್ರೇಷ್ಠವಾಗಿದೆ ಎಂದನು. ಅವಳು ಯಾರ ಮಗಳೆಂದು ವಿಚಾರಿಸಿ ತಿಳಿದುಕೊಂಡನು. ರಾಜನ ಪಕ್ಕದಲ್ಲಿದ್ದ ದೇವದತ್ತನೆಂಬುವನು ಹೇಳಿದನು, ಇವಳಿನ್ನು ಬಾಲೆ, ವಿವಾಹವಾಗಿಲ್ಲವೆಂದು. ಇವಳು ಈ ಪಟ್ಟಣದ ಶ್ರೇಷ್ಠ ಸೆಟ್ಟಿಯಾದ ನಾಗದತ್ತನ ಮಗಳು. ಈ ವಿಷಯ ತಿಳಿದು ರಾಜನು ಬಸದಿಯಿಂದ ಮನೆಗೆ ಬಂದ ಮೇಲೆ, ಅವಳ ತಾಯಿ-ತಂದೆಯರಲ್ಲಿಗೆ ದೂತರನ್ನು ಕಳಸಿ, ಇವಳನ್ನು ಯಾರಿಗೆ ಮದುವೆ ಮಾಡಿ ಕೊಡುತ್ತಿರೆಂದು ಕೇಳಿದನು. ಅದಕ್ಕೆ ಅವಳ ತಾಯಿಯು ತನ್ನ ತಮ್ಮನಾದ ವರಾಂಗನೆಂಬುವನಿಗೆ ಇವಳನ್ನು ಕೊಡುವುದಾಗಿ ತಿಳಿಸಿದಳು. ರಾಜ ತನ್ನ ಹೆಗ್ಗಡೆಳನ್ನು ಮತ್ತೆ ಕಳುಹಿಸಿ, ಸುಕೇಶಿನಿಯನ್ನು ತನಗೆ ಮದುವೆ ಮಾಡಿಕೊಡಬೇಕೆಂದು ಒಪ್ಪಿಸಿ, ಅವಳನ್ನು ಪಾಣಿಗ್ರಹಣ ಪೂರ್ವಕವಾಗಿ ವಿವಾಹವಾದನು. ಹೀಗೆ ರಾಜ ಮೆಚ್ಚಿ ಬಯಸಿದರೆ ಹೆಣ್ಣು-ಹೊನ್ನು-ಮಣ್ಣುಗಳನ್ನು ಯಾರೂ ಪ್ರತಿರೋಧ ಮಾಡದೆ ಒಪ್ಪಿಸುತ್ತಿದ್ದರೆಂದು ತಿಳಿಯುತ್ತದೆ. ಇದರಂತೆ ಕಾರ್ತಿಕ ಋಷಿಯ ಕಥೆಯಲ್ಲಿಯೂ ರಾಜನು ತನ್ನ ಕಿರಿಯ ಮಗಳ ರೂಪ ಲಾವಣ್ಯ ಸೌಂದರ್ಯಕ್ಕೆ ಮಾರು ಹೋಗುವನು. ತನ್ನ ಇಷ್ಟವನ್ನು ವಿರೋಧಿಸಿದವರಿಗೆ ಗಡಿಪಾರು ಮಾಡಿ, ಅವಳೊಂದಿಗೆ ವಿವಾಹವಾಗುವನು. ತಂದೆಯೇ ಮಗಳನ್ನು ಮೋಹಿಸಿ ಮದುವೆಯಾದ ವಿಚಿತ್ರವೆನ್ನಬಹುದಾದ ಕಥನವನ್ನು ಕಾರ್ತಿಕ ಋಷಿಯ ಕಥೆಯಲ್ಲಿದೆ. ಮಹಾದೇವಿ, ಅವಿಧಿ, ವೀರಶ್ರೀ, ಸುಕೀರ್ತಿ, ಪ್ರಿಯಸೇನೆ ಹೀಗೆ ಅತಿ ಮಧುರವಾದ ಸೌಂದರ್ಯ ಸೊಬಗಿನ ಮಹಿಳೆಯರು ಈ ಕಥೆಗಳಲ್ಲಿ ಚಿತ್ರಿತವಾಗಿದ್ದಾರೆ.

ಗಜಕುಮಾರನ ಕಥೆಯಲ್ಲಿ ವಸುದೇವಸ್ವಾಮಿಯ ಹೆಂಡತಿ ಗಾಂಧರ್ವದತ್ತೆ. ಇವರಿಗೆ ಗಜಕುಮಾರನೆಂಬ ಮಗ ಜನಿಸುವನು. ಅವನು ಪೌದನಪುರವನ್ನು ಅಪರಾಜಿತನನ್ನು ಯುದ್ಧದಲ್ಲಿ ಸೋಲಿಸುವನು. ನಿನಗೆ ಇಷ್ಟವಾದದನ್ನು ಬೇಡಿಕೋ ಎಂದೆನ್ನುವನು. ನಿಮ್ಮ ರಾಣಿವಾಸದವರನ್ನು ಬಿಟ್ಟು, ನನಗೆ ಇಷ್ಟವಾಗುವ ಈ ಪಟ್ಟಣದ ಹೆಂಡಿರನ್ನು ಸ್ವೀಕರಿಸಿ ಬಾಳುವೆನೆನ್ನುವನು. ಹಾಗೆಯೇ ಆಗಲಿ ಮಾಡೆಂದು ರಾಜನು ಹೇಳಿದನು. ತಾನು ಬಯಸಿದ ವರವನ್ನು ಸ್ವೀಕರಿಸಿ ಆ ಪಟ್ಟಣದ ವ್ಯಾಪಾರಿಗಳ ಬ್ರಾಹಣರ, ಒಕ್ಕಲಿಗರ, ಸಾಮಂತರ ಮುಂತಾದವರ ಒಳ್ಳೆಯ ಸತಿ ಸ್ತ್ರೀಯರನ್ನು ತನ್ನ ಕಣ್ಣಿಗೂ ಮನಸ್ಸಿಗೂ ಇಷ್ಟವಾದವರಲ್ಲಿ ತನ್ನಿಷ್ಟದಂತೆ ಸಂಬಂಧವನ್ನು ಬೆಳೆಸಿಕೊಂಡು ಜೀವಿಸುತ್ತಿದ್ದನು. ಅದೇ ಪಟ್ಟಣದ ಅಕ್ಕಸಾಲಿಗನಾದ ಪಂಗುಳನೆಂಬುವನಿಗೆ ವಸುಂಧರೆಯೆಂಬ ಅತಿಶಯವಾದ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವಭಾವ, ವಿಲಾಸ, ವಿಭ್ರಮಗಳಿಂದ ಕೂಡಿದ ಹೆಂಡತಿಯಿದ್ದಳು. ಗಜಕುಮಾರನು ಅವಳನ್ನು ನೋಡಿ, ಆಕೆಯನ್ನು ಆಸೆಪಟ್ಟು ತನ್ನ ಮನೆಯಲ್ಲಿಟ್ಟುಕೊಂಡು ಅವಳೊಂದಿಗೆ ಆಸಕ್ತನಾಗಿ ಜೀವಿಸುತ್ತಿದ್ದನು. ಭುಜಬಲ, ಅಧಿಕಾರ ಬಲವುಳ್ಳ ರಾಜರು ಸೋಲಿಸಿದ ರಾಜರ ಸ್ತ್ರೀಯರನ್ನು ಇಲ್ಲವೆ ಆಕ್ರಮಿಸಿದ ನಗರದ ಸ್ತ್ರೀಯರನ್ನು ವಶಪಡಿಸಿಕೊಂಡು ಕಾಮಭೋಗಕ್ಕಾಗಿ ಬಳಸುತಿದ್ದರೆಂದು ಈ ಕಥೆಯಿಂದ ತಿಳಿದು ಬರುತ್ತದೆ. ಇದೇ ತರಹದ ಪ್ರಸಂಗವು ಚಿಲಾತಪುತ್ರನ ಕಥೆಯಲ್ಲಿಯೂ ಬರುತ್ತದೆ. ಈ ತರಹದ ಸ್ತ್ರೀಲೋಲುಪ್ತರಾದ ಪುರುಷರ ಕೈಗೊಂಬೆಳಾಗಿ ಒಂದೊಂದು ಕಡೆ ಮಹಿಳೆ ಚಿತ್ರತವಾಗಿರುವುದು ಆ ಕಾಲಧರ್ಮವನ್ನು ಸಮಾಕಾಲೀನ ಸಮಾಜದ ವಸ್ತು ಸ್ಥಿತಿಯನ್ನು ತಿಳಿಸುತ್ತದೆ.

ಭದ್ರಬಾಹು ಭಟ್ಟಾರರ ಕಥೆಯಲ್ಲಿ ನಂದಿಮಿತ್ರ ಚಿಕ್ಕಸ್ವಾಮಿಯನ್ನು ತಮ್ಮ ಮನೆಗೆ ಊಟಕ್ಕೆ ಕರೆಯಲು ರಾಣಿ ಧಾರಿಣಿ ಮಹಾದೇವಿ ಹೋಗುವ ಪ್ರಸಂಗದಲ್ಲಿ ಚಿತ್ರತವಾದ ಮಹಿಳಾ ಸಮೂಹ ಹೀಗಿದೆ. ಧಾರಿಣಿ ಮಹಾದೇವಿಯಯ್ಯೂರ್ವರರಸಿಯರ್ಕಳುಂ ಪೆಂಡವಾಸದಗ್ಗಳದ ಸೂಳೆಯರ್ಕಳುಂಬೆರಸು ವೇಸರಿಗಳ್ಗೆಗಳುಂ ಪಿಡಿಗಳುಂ ಸಿಬಿಗೆಗಳುಮನೇರಿ ಸೀಗುರಿಗಳುಮಂ ಕೊಡೆಗಳುಮಂ ಪಿಡಿಯಿಸಿ ಎಕ್ಕಮದ್ದಳೆಯ ಕೊಲಲ ಝುಂಕಾರದ ಪರಿಗಳ್ ಮುಂದೆ ಬಾಜಿಸುತ್ತಂ ಬಳಿಯಂ ಕಾಪಿನವರ್ ಅವರೆ ಮುಂದಣ ಮಾನಸರಮ ಪಡಿಯರರ್ ತೋಲಗಿಸುತ್ತಂ ಬರೆ ವಿದ್ಯಾಧರಿಯರ್ಕಳ ಬರ್ಪಂತೆ ಬಂದು" (ಪು.142, ಭದ್ರಬಾಹುಭಟ್ಟಾರರ ಕಥೆ) ಹೀಗೆ ರಾಣಿವಾಸದ ಶ್ರೇಣಿಕೃತವಾದ ಸ್ತ್ರೀಯರ ಸಮೂಹವು ರಾಣಿಯೊಂದಿಗೆ ಚಿಕ್ಕಸ್ವಾಮಿಯಾದ ನಂದಿಮಿತ್ರನನ್ನು ಕರೆಯಲು ಬಂದವರ ಸೊಬಗನ್ನು ವಣಿಸಿದ್ದಾನೆ ಕಥೆಗಾರ.

ಚಂಪೂ ಕಾವ್ಯಗಳಲ್ಲಿ ಸ್ತ್ರೀಯರು : ಪಂಪನ ಎರಡು ಮಹಾಕಾವ್ಯಗಳಾದ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣದಲ್ಲಿ ಅಸಂಖ್ಯಾತ ರಾಣಿಯರ, ದಾಸಿಯರ, ವಾರಾಂಗನೆಯರ, ನೃತ್ಯಗಾರ್ತಿಯರ, ಬೆಲೆವೆಣ್ಣುಗಳ ಕಾರ್ಯವೈಖರಿಯ ವಿವರಣೆ ಮತ್ತು ವರ್ಣನೆ ಬಂದಿದೆ. ಅರಿಕೇಸರಿಯ ತಾಯಿಯಾದ ಜಾಕವ್ವೆಯನ್ನು ಕುರಿತು ಪಂಪ ಹೀಗೆ ಹೇಳಿದ್ದಾನೆ.

ಆ ನರಸಿಂಹಮಹೀಶ ಮ
ನೋನಯನಪ್ರಿಯೆ ವಿಲೋಳನೀಳಾಳಕೆ ಚಂ।
ದ್ರಾನನೆ ಜಾಕವ್ವೆ ದಲಾ
ಜಾನಕಿಗಗ್ಗಳಮೆ ಕುಲದೊಳಂ ಶೀಲದೊಳಂ ॥
(ಪು.77, ಪಂಪಭಾರತ)

ತನಗೆ ಆಶ್ರಯ ನೀಡಿದ ರಾಜಮನೆತನದ ಚರಿತ್ರೆಯನ್ನು ಕಟ್ಟಿಕೊಡುವ ಸಂದರ್ಭದಲ್ಲಿ ಆ ಮನೆತನ ರಾಣಿಯು ಅರಿಕೇಸರಿಯ ಜನನಿಯ ವ್ಯಕ್ತಿತ್ವ, ರೂಪ ಲಾವಣ್ಯ ಸೌಂದರ್ಯ, ಗುಣಶೀಲತೆಯನ್ನು ವರ್ಣಿಸಿ ಅವಳು ಸೀತಾದೇವಿಗೂ ಅಧಿಕವಾಗಿದ್ದಳೆಂದಿದ್ದಾನೆ. ಮುಂದುವರೆದು ಅವಳ ಸೌಂದರ್ಯವನ್ನು ಹೀಗೆ ವರ್ಣಿಸಿರುವನು.

ಪೊಸತಲರ್ದ ಬಿಳಿಯ ತಾವರೆ
ಯೆಸಳ್ಗಳ ನಡುವಿರ್ಪಸಿರಿಯುಮಾಕೆಯ ಕೆಲದೊಳ್।
ನಸು ಮಸುಳ್ದು ತೋರ್ಪಳನೆ ಪೋ
ಲಿಸುವೊಡೆ ಜಾಕವ್ವೆಗುಳಿದ ಪೆಂಡಿರ್ ದೊರೆಯೇ ॥
(ಪು.77. ಪಂಭಾ)

ಹೊಸದಾಗಿ ಅರಳಿದ ಬಿಳಿಯ ತಾವರೆಯ ದಳದ ಮಧ್ಯದಲ್ಲಿರುವ ಲಕ್ಷ್ಮಿದೇವಿಯೂ ಆಕೆಯ ಪಕ್ಕದಲ್ಲಿ ಸ್ವಲ್ಪ ಕಾಂತಿಹೀನಳಾಗುತ್ತಾಳೆ ಎನ್ನಲು ಸ್ತ್ರೀಯರು ಆ ಜಾಕವ್ವೆಗೆ ಹೋಲಿಸಲು ಸಮಾನರಾಗುತ್ತಾರೆಯೇ ಎಂದಿರುವನು. ಅತಿಯಾದ ಅಭಿಮಾನ, ಗೌರವನ್ನು ಅವಳ ಕುರಿತು ಕವಿ ತೋರಿರುವುದು ಇಲ್ಲಿ ಕಾಣುತ್ತೇವೆ. ಜಾಕವ್ವೆಯ ಪಕ್ಕದಲ್ಲಿ ಲಕ್ಷ್ಮಿದೇವಿಯು ಕಾಂತಿರಹಿತಾಗುವಳು ಎಂದ ಮೇಲೆ ಇನ್ನುಳಿದ ಸ್ತ್ರೀಯರೇನು ಅವಳ ಸಮಾನಕ್ಕೆ ಬರಲು ಸಾಧ್ಯವಾಗುತ್ತದೆಯೇ ಎಂದಿರುವನು.

ಮತ್ಸ್ಯಗಂಧಿ, ಅಂಬೆ–ಅಂಬಿಕೆ–ಅಂಬಾಲಿಕೆಯರು, ಕುಂತಿ, ಗಾಂಧಾರಿ, ಮಾದ್ರಿ, ದ್ರೌಪದಿ, ನಾಗಕನ್ಯೆಯರು, ಸುಭದ್ರೆ, ಭಾನುಮತಿ, ಚಂದ್ರಮತಿ, ವೇಶ್ಯೆಯರು, ಅಪ್ಸರೆಯರು, ಸುದೇಷ್ಣೆ, ಉತ್ತರೆ ಮಹಾಭಾರತದಲ್ಲಿರುವ ಈ ಮುಂತಾದ ಮಹಿಳಾ ಪಾತ್ರಗಳನ್ನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಚಿತ್ರಿಸಿರುವನು.

ಮಹಾಭಾರತದಲ್ಲಿ ಬೆಳೆದ ವಂಶವೃಕ್ಷಕ್ಕನುಗುಣವಾಗಿ ಕಥಾ ನಿರೂಪಣೆಯನ್ನು ಮಾಡುತ್ತ ಆಯಾ ಪ್ರಸಂಗಗಳಲ್ಲಿ ಬರುವ ಸ್ತ್ರೀಪಾತ್ರಗಳನ್ನು ತನ್ನ ಪ್ರತಿಭೆಯ ಕುಲುಮೆಯಲ್ಲಿ ಕಾಯಿಸಿ ಬಡೆದು ತಿದ್ದಿ ರೂಪುಗೊಳಿಸಿರುವನು. ಐತಿಹಾಸಿಕ ಮಹಿಳೆ ಜಾಕವ್ವೆಯ ನಂತರ ಕಥಾಸರಣಿಯಲ್ಲಿ ಮೊದಲು ಮತ್ಸ್ಯಗಂಧಿ ಬರುತ್ತಾಳೆ. ಯಮುನಾ ನದಿತೀರದಲ್ಲಿ ತನ್ನ ಕುಲವೃತ್ತಿಯಲ್ಲಿ ತೊಡಗಿದ್ದಳು ಮತ್ಸ್ಯಗಂಧಿ. ಅಲ್ಲಿಗೆ ಪರಾಶರಾಮುನಿಗಳು ಬಂದು ಈ ನದಿಯನ್ನು ದಾಟಿಸು ಎಂದು ಕೇಳುವನು. ಅದಕ್ಕವಳು ಸಾವಿರ ಜನರು ತುಂಬದ ಹೊರತು ಈ ದೋಣಿಯನ್ನು ನಡೆಸುವುದಿಲ್ಲವೆಂದಳು. ಅದು ಇವತ್ತಿಗೂ ಅನ್ವಯವಾಗುವ ನಿಯಮ. ವ್ಯವಹಾರಿಕಜ್ಞಾನ ಮತ್ತು ವೈಜ್ಞಾನಿಕ ದೃಷ್ಟಿ ಅವಳಲ್ಲಿದೆ. ನದಿಯಲ್ಲಿ ದೋಣಿಯ ನಡೆಯಬೇಕಾದರೆ ಅದಕ್ಕೆ ಬೇಕಾದ ಸಮಾನ ಭಾರದ ಅಗತ್ಯವನ್ನು ಅವಳ ಮಾತು ಸೂಚಿಸುತ್ತದೆ. ಅದಕ್ಕೆ ಮುನಿಗಳು ಸಾವಿರ ಜನರ ಭಾರವನ್ನುಂಟು ಮಾಡುವುದಾಗಿ ದೋಣಿಯನ್ನು ಹತ್ತಿಸೆನ್ನುವರು. ಅದಕ್ಕವಳು ಅವರನ್ನು ದೋಣಿಯಲ್ಲಿ ಹತ್ತಿಸಿಕೊಂಡು ಸಾಗುವಾಗ ಅವಳ ತಾರುಣ್ಯದ ಮೈಕಟ್ಟಿಗೆ ಆ ಮುನಿಪುಂಗವನು ಮನಸೋತು, ಅವಳ ದುರ್ಗಂಧವನ್ನು ತನ್ನ ಮಂತ್ರ ಶಕ್ತಿಯಿಂದ ದೂರ ಮಾಡಿ ಯೋಜನಗಂಧತ್ವವನ್ನು ನೀಡಿ, ಅಲ್ಲಿಯ ಮಂಜು ತೆರೆಯನ್ನಾಗಿಸಿಕೊಂಡು ಅವಳೊಂದಿಗೆ ಆ ಮುನಿಶ್ರೇಷ್ಠನು ಸಮಾಗಮನಾದ. ಅದರ ಫಲವಾಗಿ ವ್ಯಾಸಮಹರ್ಷಿ ಜನಿಸಿದ. ಅವನನ್ನು ಪರಾಶರ ಮಹಾರ್ಷಿಯು ತನ್ನೊಂದಿಗೆ ಕರೆದುಕೊಂಡು ಹೋದನು. ಇತ್ತ ಸತ್ಯವತಿಗೆ ಮತ್ತೆ ಕನ್ಯತ್ವವನ್ನು ದಯಾಪಾಲಿಸಿ ಉತ್ತರದ ಕಡೆ ನಡೆದರು.

ಶಂತಮಹಾರಾಜನು ಭೇಟೆಯನ್ನಾಡುತ್ತ ಯಮುನಾ ನದಿತೀರಕ್ಕೆ ಬಂದಾಗ ಅವಳ ಯೋಜನಗಂಧತ್ವದ ವಾಸನೆಯು ಅವಳೆಡೆಗೆ ಸೆಳೆದು ತರುತ್ತದೆ. ದುಂಬಿಯಂತೆ ಅವನು ಅವಳಿಗೆ ಸೋತು, ಮೋಹಗೊಂಡು ಅವಳಲ್ಲಿ ತನ್ನ ಅಭಿಲಾಷೆಯನ್ನು ಹೀಗೆ ತಿಳಿಸುವನು.

ಕಂಪು ತಟ್ಟೆ ಮಧುಪಂಬೋಲ್ ಸೋಲ್ತು ಕಂಡೊಲ್ದು ನಃ
ಲ್ಮೆಗೆ ದಿಬ್ಯಂಬಿಡಿವಂತೆವೊಲ್ ಪಿಡಿದು ನೀನ್ ಬಾ ಪೋಪಮೆಂದಂಗೆ ಮೆ
ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡವೊಡೆ ನೀವೆಮ್ಮಯ್ಯನಂ ಬೇಡಿರೇ ॥

ಅವಳ ಸೊಗಸಿಗೆ ಮನಸೋತು ಅವಳನ್ನು ಪ್ರೀತಿಸಿ, ತನ್ನ ಪ್ರೀತಿಗೆ ಸಾಕ್ಷಿಯಾಗುವಂತೆ ದಿವ್ಯವನ್ನು ಹಿಡಿದಂತೆ ಅವಳ ಕೈಯನ್ನು ಹಿಡಿದು ನೀನು ಬಾ ಹೋಗೋಣವೆಂದಾಗ'. ಅವಳು ನಾಚಿಕೊಂಡು ಮೆಲ್ಲಗೆ "ನೀವು ನನ್ನನ್ನು ಬೇಡುವುದಾದರೆ ನಮ್ಮ ತಂದೆಯನ್ನು ಕೇಳಿರೆಂದಳು." ಶಂತನಿಗೆ ಅವಳು ಹೇಳಿದಂತೆ ಪರಾಶನಿಗೆ ಏಕೆ ಹೇಳಲಿಲ್ಲವೆಂಬ ಪ್ರಶ್ನೆಯುಂಟಾಗುವುದು. ಬಹುಶಃ ಪರಾಶರಾ ಮತ್ತು ಮತ್ಸ್ಯಗಂಧಿಯರಿಬ್ಬರಿದ್ದ ಸ್ಥಳ, ವಾತವರಣ, ಸಮಯದ ಮತ್ತು ತಾರುಣ್ಯದ ಕೈವಶಳಾಗಿದ್ದಳೆನ್ನಬಹುದು. ಅಲ್ಲಿ ಯೋಚನೆಗೆ ಸಮಯವಿಲ್ಲ. ಆದರೆ ಒಂದು ಪಾಠ ಕಲಿತ ಅನುಭವ ಇವಳಿಗಾಗಿತ್ತು. ಅದೇನೆಂದರೆ, ಪರಾಶರಾಮುನಿ ಅವಳಲ್ಲಿ ಅನುರಕ್ತನಾಗಿ ಒಂದು ಮಗುವನ್ನು ಪಡೆದು ತನ್ನೊಂದಿಗೆ ಕರೆದೊಯ್ದು, ಇವಳನ್ನು ಇಲ್ಲೆ ಬಿಟ್ಟದ್ದು ಇಂದು ಶಂತನಿಗೆ, ನನ್ನ ಬೇಡುವುದಾದರೆ ನನ್ನ ತಂದೆಯಲ್ಲಿ ಬೇಡಿಕೋ ಎಂದು ಹೇಳಲು ಕಾರಣವಾಗಿರಬಹುದು. ಇದು ಸಂಬಂಧ ಬೆಳೆಸುವಾಗ ತಂದೆ–ತಾಯಿಗಳ ಅನುಮತಿ ನಿಯಮವನ್ನು ಸೂಚಿಸುತ್ತದೆ. ಅಲ್ಲದೆ ಅವಳು ಮತ್ತೊಮ್ಮೆ ಮೋಸ ಹೋಗಲು ತಯ್ಯಾರಿಲ್ಲವೆಂಬ ಎಚ್ಚರಿಕೆ ಗಂಟೆ ಅವಳ ಮಾತಿನಲ್ಲಿದೆ.

ಅಂಬೆ–ಅಂಬಿಕೆ–ಅಂಬಾಲಿಕೆಯರು ಈ ಮೂವರು ಕಾಶಿರಾಜನ ಮಕ್ಕಳು. ವಿಚಿತ್ರವೀರ್ಯನು ರಾಜ್ಯಭಾರವನ್ನು ಮಾಡತೊಡಗಿದಾಗ ದಂಡಯಾತ್ರೆ ಕೈಗೊಂಡು ಕಾಶಿರಾಜನನ್ನು ಸೋಲಿಸಿ, ಆತನ ಈ ಮೂರುಜನ ಹೆಣ್ಣುಮಕ್ಕಳನ್ನು ಭೀಷ್ಮ ಅಪಹರಿಸಿಕೊಂಡು ಬರುವನು. ಹಾಗೆ ತಂದ ಈ ಮೂವರನ್ನು ತನ್ನ ತಮ್ಮನಾದ ವಿಚಿತ್ರವೀರ್ಯನಿಗೆ ಅಣ್ಣನಾದ ಭೀಷ್ಮನು ಮದುವೆ ಮಾಡುವಾಗ, ಅಂಬೆ ನಿರಾಕರಿಸಿ, ಭೀಷ್ಮನಲ್ಲದೆ ಬೇರೆ ಯಾರೊಂದಿಗೂ ತಾನು ಮದುವೆ ಆಗುವುದಿಲ್ಲವೆಂದಳು. ಆಗ ಅವಳ ತಂಗಿಯರಿಬ್ಬರಿಗೆ ವಿಚಿತ್ರವೀರ್ಯನೊಂದಿಗೆ ವಿವಾಹವಾಗುವುದು. ಕಾಮ ಸುಖಕ್ಕಾಗಿ ಸೋತು ನಿನ್ನೊಂದಿಗೆ ವಿವಾಹವಾಗಿ ನನ್ನ ಬ್ರಹ್ಮಚರ್ಯವನ್ನು ಹಾಳು ಮಾಡಿಕೊಳ್ಳುವುದಿಲ್ಲವೆಂದು ಸ್ಪಷ್ಟವಾಗಿ ಅಂಬೆಗೆ ಭೀಷ್ಮ ತಿಳಿಸಿದನು. ಆಗವಳು ತನ್ನ ಬಾಲ್ಯದಲ್ಲಿ ಮದುವೆ ಆಗುವೆನೆಂದು ಇವಳಿಗೆ ಉಂಗುರ ತೊಡಿಸಿದ್ದ ಸಾಲ್ವ ಎನ್ನುವ ಅರಸನಲ್ಲಿಗೆ ಹೋಗಿ, ನೀನು ನನ್ನನ್ನು ಸ್ವೀಕರಿಸೆಂದು ಕೇಳಿಕೊಳ್ಳುವಳು. ಯುದ್ಧದಲ್ಲಿ ನನ್ನನ್ನು ಸೋಲಿಸಿದ ಭೀಷ್ಮನು ನಿನ್ನನ್ನು ಅಪಹರಿಸಿಕೊಂಡು ಹೋದನು. ಆದ್ದರಿಂದ ನಾನು ನಿನ್ನನ್ನು ಪಡೆಯಲು ಅನರ್ಹನಾದೆ, ನಾನು ನಿನ್ನಂತೆ ಹೆಂಗಸಾಗಿರುವೆನೆಂದು ಹೇಳಿ, ಅಂಬೆಯನ್ನು ತಿರಸ್ಕರಿಸಿದನು .ಅವಳು ಪರಶುರಾಮನಲ್ಲಿಗೆ ಹೋಗಿ ತನಗೆ ಒದಗಿದ ದುರಾವಸ್ಥೆಯನ್ನು ತೋಡಿಕೊಳ್ಳುವಳು. ತಾನು ಭೀಷ್ಮನೊಂದಿಗೆ ವಿವಾಹವಾಗಬೇಕು, ಇಲ್ಲದಿದ್ದರೆ ಸಾವು ದಯಾಪಾಲಿಸೆಂದು ದುಃಖಿಸಿ ವಿನಂತಿಸಿದಳು. ನನ್ನ ಶಿಷ್ಯನಾದ ಭೀಷ್ಮನು ನನ್ನಲ್ಲಿ ಗೌರವ ತೋರುವುದಾದರೆ ನಿನ್ನನ್ನು ಮದುವೆ ಆಗುವನು, ಇಲ್ಲದಿದ್ದರೆ ನನ್ನೊಂದಿಗೆ ಯುದ್ಧಮಾಡಬೇಕಾಗುವುದು. ಸಾಧ್ಯವಾದರೆ ಬಾಣದಿಂದಲೇ ನಿನ್ನ ಮದುವೆ ಮಾಡಿಸವೆನೆಂದು ಭರವಸೆಯನ್ನೀಯುವನು. ಭೀಷ್ಮನಲ್ಲಿ ಪರಶುರಾಮನು ಹೋಗುವನು. ಸಕಲ ಮರ್ಯಾದೆ ಗೌರವಗಳಿಂದ ಆತನು ಗುರುವನ್ನು ಸತ್ಕರಿಸಿ ಸ್ವಾಗತಿಸುವನು. ಏನಾಜ್ಞೆಯೆಂದು ವಿಚಾರಿಸುವನು. ಅದಕ್ಕವನು ನನ್ನಾಜ್ಞೆಯನ್ನು ಮನ್ನಿಸಿ, ಈ ಕನ್ಯೆಯನ್ನು ವಿವಾಹವಾಗಬೇಕೆಂದನು. ಇಲ್ಲ ಎಂದರೆ ಯುದ್ಧಕ್ಕೆ ಸಿದ್ಧನಾಗಬೇಕೆಂಬ ಆಯ್ಕೆಗಳನ್ನು ನೀಡಿದನು. ಆಗವನು ಮದುವೆ ನಿರಾಕರಿಸಿ, ಯುದ್ಧವನ್ನೇ ಆಯ್ದುಕೊಂಡನು. ಇಬ್ಬರಿಗೂ ಘನಘೋರ ಯುದ್ಧವಾಯಿತು. ಅದರಲ್ಲಿ ಪರಶುರಾಮ ಶಕ್ತಿಗುಂದಿ ಮೂರ್ಛೆ ಹೋದ. ಈ ದೃಶ್ಯವನ್ನು ನೋಡಿ, ಅಂಬೆಯು ನನ್ನಿಂದ ನಿನಗೆ ಸಾವುಂಟಾಯಿತೆಂದು ಕೋಪದಿಂದ ಅಗ್ನಿಪ್ರವೇಶ ಮಾಡಿ ದೇಹತ್ಯಾಗಮಾಡಿದಳು. ಮುಂದೆ ದ್ರುಪದನ ಮಹಾರಾಣಿಗೆ ಮಗನಾಗಿ ಹುಟ್ಟಿ ಕಾರಣಾಂತರಗಳಿಂದ ಶಿಖಂಡಿಯಾಗುವಳು. ಈ ಪಾತ್ರದಲ್ಲಿ ಸೇಡು, ಛಲ, ಹಾತಾಸೆಗಳನ್ನು ಕಾಣುತ್ತೇವೆ. ತನ್ನ ಪ್ರತಿಜ್ಞೆಯಂತೆ ಮಹಾಭಾರತದಲ್ಲಿ ಭೀಷ್ಮನನ್ನು ಈ ಶಿಖಂಡಿಯೇ ಹತಮಾಡುವನು.

ವಿಚಿತ್ರವೀರ್ಯನು ಭೀಷ್ಮರ ಬೆಂಬಲದಿಂದ ಶೌರ್ಯಸಾಹಸ ಮೆರೆದು ರಾಜ್ಯಲಕ್ಷ್ಮಿಯನ್ನು ಕೈವಶ ಮಾಡಿಕೊಂಡು ಕ್ಷಯರೋಗ ಪೀಡಿತನಾಗಿ ಮಕ್ಕಳಿಲ್ಲದೆ ಸಾವನಪ್ಪಿದನು. ಭೀಷ್ಮ ಮತ್ತು ಸತ್ಯವತಿಯರು ಅತೀವ ದುಃಖಿತರಾಗಿ ಈ ರಾಜ್ಯಕ್ಕೆ ರಾಜನಿಲ್ಲದಂತಾಯಿತಲ್ಲವೆಂದು ಕ್ಷೋಭೆಗೆ ಒಳಗಾದರು. ಆಗ ಸತ್ಯವತಿ ಭೀಷ್ಮನಿಗೆ ಹೇಳಿದಳು ನೀನೇ ನನಗೆ ಮಗನೆಂದು ಲೋಕವೆಲ್ಲ ಹೊಗಳುವಂತೆ ನಿನ್ನ ತಮ್ಮಂದಿರಿಗೆ ಭಂಗ ಬರದಂತೆ

ಸತ್ಯ ಕೆಡದಂತೆ ನಡೆದುಕೊಂಡಿರುವಿ. ನಮ್ಮ ವಂಶಕ್ಕೆ ನೀನಿರುವಾಗ ಬೇರೆ ಮಕ್ಕಳು ಬೇಕೆ? ಒರಟುತನವನ್ನು ಬಿಟ್ಟು ನೀನೆ ರಾಜ್ಯಭಾರವನ್ನು ಕೈಗೊಳ್ಳು ಎಂದು ಮಗನಾದ ಭೀಷ್ಮನಿಗೆ ಸತ್ಯವತಿ ಬೇಡಿಕೊಂಡಳು. ಅದನ್ನು ಭೀಷ್ಮನು ತಿರಸ್ಕರಿಸಿದನು. ಅವನೊಂದಿಗೆ ಮಂತ್ರಾಲೋಚನೆ ಮಾಡಿ ವ್ಯಾಸರನ್ನು ಕರೆಯಿಸಿ ತಮ್ಮ ಸೋಮವಂಶವನ್ನು ಮುಂದುವರೆಸಿಕೊಂಡು ಹೋಗುವವರು ಯಾರು ಇಲ್ಲದಂತಾಗಿದೆ. ಆದ್ದರಿಂದ ನಿನ್ನ ತಮ್ಮನಾದ ವಿಚಿತ್ರವೀರ್ಯನ ಸ್ಥಾನದಲ್ಲಿ ಅಂಬಿಕೆಗೆ ಮತ್ತು ಅಂಬಾಲಿಕೆಗೂ ಸಂತಾನಭಾಗ್ಯದ ವರಪ್ರಸಾದವನ್ನು ದಯಾಪಾಲಿಸೆಂದಳು. ತಾಯಿಯ ಆಣತಿಯ ಮೇರೆಗೆ ವ್ಯಾಸನು ಒಪ್ಪಿ, ತನ್ನ ಯೋಗಶಕ್ತಿಯ ಮೂಲಕ ತನ್ನೆದುರಿನಲ್ಲಿರುವ ಅಂಬಿಕೆ–ಅಂಬಾಲಿಕೆಯರಿಗೆ ತನ್ನ ದಿವ್ಯದೃಷ್ಟಿಮಂತ್ರದಿಂದಲೇ ನವೀನವಾದ ಗರ್ಭಸೌಂದರ್ಯವನ್ನುಂಟು ಮಾಡಿದ. ಇಬ್ಬರೂ ಗರ್ಭಧರಿಸಿದರು. ಇನ್ನೊಂದು ಮಗುವನ್ನು ಪಡೆಯಲು ಅಂಬಿಕೆಗೆ ಹೇಳಲು, ಅವಳು ಆಯಾಸಗೊಂಡವಳಾಗಿ ತನ್ನ ದಾಸಿಗೆ ತನ್ನಂತೆ ಅಲಂಕರಿಸಿ ಕಳಿಸಿದಳು. ಅವಳಿಗೂ ಅವನು ವರಪ್ರಸಾದವನ್ನು ನೀಡಿದನು. ಅಂಬಿಕೆಗೆ ಧೃತರಾಷ್ಟ್ರ ಅಂಬಾಲಿಕೆಗೆ ಪಾಂಡು, ಅಂಬಿಕೆಯ ದಾಸಿಗೆ ವಿದುರ ಈ ಮೂರು ಜನ ಸಂತಾನವನ್ನು ಸತ್ಯವತಿ ತನ್ನ ಸೊಸೆಯಂದಿರಲ್ಲಿ ವ್ಯಾಸರಿಂದ ಪಡೆಯಿಸಿದಳು. ಇದೊಂದು ನಿಯೋಗ ಪದ್ಧತಿಯೆಂದು ತಿಳಿದು ಬರುತ್ತದೆ. ವಂಶೋತ್ಪತ್ತಿಗೆ ಒಂದೇ ವಂಶದ ಪರಪುರುಷನ ಮೂಲಕ ಸ್ತ್ರೀಯೊಡನೆ ಸಮಾಗಮ ಮಾಡಿಸುವ ಮೂಲಕ ಮಕ್ಕಳನ್ನು ಪಡೆಯಬಹುದಾಗಿತ್ತೆಂದು ತಿಳಿದು ಬರುತ್ತದೆ.

ಕುಂತಿ–ಮಾದ್ರಿಯರು ಮಹಾಭಾರತದ ಮಹತ್ವದ ರಾಜಮನೆತದ ಮಹಿಳೆಯರು. ಇವರು ತಮ್ಮ ಬದುಕಿನಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಿದವರು. ಅವರ ಸೌಂದರ್ಯವನ್ನು ಪಂಪನು ಹೀಗೆ ವರ್ಣಿಸಿದ್ದಾನೆ.

ತುರುಗೆಮೆ ನೀಳ್ದ ಪುರ್ವು ನಿಡುಣ್ ಪೊರೆಯಲ್ಲದೆ ಬಟ್ಟೆತಪ್ಪ ಬಾ
ಯ್ದೆರೆ ತನು ರೇಖೆಗೊಂಡ ಕೊರಲೊಡ್ಡಿದ ಪೆರ್ಮೊಲೆ ತೆಳ್ವಸಿರ್
–ಕರಂ।
ನೆರೆದ ನಿತಂಬವಿಂಊವಡೆದೊಳ್ತಡೆ ನಕ್ಕರವದ್ದಿ ತಾನೆ ಪೋ
ಕಿರುದೊಡೆಯೆಂದು ಧಾತ್ರಿ ಪೊಗಳ್ಗುಂ ಪೊಗಳ್ವನ್ನರೆ ಕುಂತಿ
–ಮಾದ್ರಿಗಳ್ ॥ (ಪು.108 ಪಂಭಾ)

ಈ ಮೇಲಿನ ಪದ್ಯದಲ್ಲಿ ಪಂಪನು ಶಬ್ದಚಿತ್ರದಲ್ಲಿ ವರ್ಣಿಸಿದ ಕುಂತಿ–ಮಾದ್ರಿಯರ ಸೌಂದರ್ಯವನ್ನು ರೇಖಾಚಿತ್ರವನ್ನು ಬಿಡಿಸಬಹುದಾದಷ್ಟು ಸದೃಶ್ಯವಾಗಿದೆ. ಕುಂತಿ ಮಾದ್ರಿಯರ ದಟ್ಟವಾದ ಕೂದಲಿನಿಂದ ಕೂಡಿದ ರೆಪ್ಪೆ. ಉದ್ದವಾಗಿರುವ ಹುಬ್ಬು, ದೀರ್ಘವಾದ ಕಣ್ಣು, ಹಗುರವಾಗಿಯೂ ದುಂಡಾಗಿಯೂ ಇರುವ ತುಟಿ, ಸಣ್ಣ ರೇಖೆಗಳಿಂದ ಕೂಡಿದ ಕೊರಳು, ಮುಂದಕ್ಕೆ ಚಾಚಿಕೊಂಡಿರುವ ದಪ್ಪವಾದ ಸ್ತನ, ತೆಳುವಾದ ಹೊಟ್ಟೆ, ವಿಶೇಷಾಗಿ ತುಂಬಿಕೊಂಡಿರುವ ಪೃಷ್ಠಭಾಗ, ಹೊಂದಿಕೊಂಡಿರುವ ಒಳತೊಡೆ, ಚಿಕ್ಕತೊಡೆ ಇವುಗಳು ಸೊಗಸಾಗಿವೆ ಎಂದು ಲೋಕವೆಲ್ಲ ಅವರನ್ನು ಹೊಗಳಿದವು. ವಾಸ್ತವಾಗಿ ಕುಂತಿ–ಮಾದ್ರಿಯರು ಹೊಗಳಿಸಿಕೊಳ್ಳುವಂಥವರೇ ಸರಿ ಎಂದಿರುವನು ಪಂಪ.

ಕುಂತಿಯು ಯದುವಂಶದ ರಾಜನ ಮಗಳು. ಅವಳು ಕುಂತಿಭೋಜನ ಮನೆಯಲ್ಲಿ ಬೆಳೆಯುವಾಗ, ಅಲ್ಲಿಗೆ ಬಂದಿದ್ದ ದುರ್ವಾಸ ಋಷಿಗಳ ಶುಶ್ರೂಷೆ ಮಾಡಿದಾಗ, ಅವರು ಅವಳನ್ನು ಮೆಚ್ಚಿ ಅವಳಿಗೆ ಐದು ಮಂತ್ರಾಕ್ಷರಗಳನ್ನು ನೀಡಿದರು. ನೀನು ಬಯಸಿದ ದೈವವನ್ನು ಆಹ್ವಾನಿಸಿ ಮಂತ್ರಾಕ್ಷರಗಳನ್ನು ಪಠಿಸಿದರೆ, ಅಂಥ ಹೋಲಿಕೆಯ ಮಕ್ಕಳನ್ನು ಪಡೆಯುವೆಂದು ಅಪ್ಪಣೆ ಕೊಟ್ಟರು. ಅವಳು ಬಾಲ್ಯದಲ್ಲಿರುವಾಗ ವರದ ಪರೀಕ್ಷೆ ಮಾಡುವ ಕುತೂಹಲದಿಂದ ಗಂಗಾನದಿಗೆ ಹೋದಾಗ ನೀರಿನಲ್ಲಿ ಮಿಂದು ಸೂರ್ಯನನ್ನು ಧ್ಯಾನಿಸದಳು. ಅವನು ಅವಳಿಗೆ ಪ್ರತ್ಯಕ್ಷವಾಗಿ ಕರ್ಣಕುಂಡಲ ಭೂಷಿತನಾದ ಕರ್ಣನೆಂಬ ಮಗುವನ್ನು ದಯಾಪಾಲಿಸಿದ. ಅವಳು ಇನ್ನು ಕನ್ಯೆಯಾಗಿರುವುದರಿಂದ, ಆ ಮಗುವನ್ನು ಗಂಗಾನದಿಯಲ್ಲಿ ಬಿಡುವಳು. ಹೀಗೆ ಅವಳು ಮುಂದೆ ಪಾಂಡುರಾಜನನ್ನು ವಿವಾಹವಾಗುವಳು. ಋಷಿಶಾಪದಿಂದ ಪಾಂಡು ತನ್ನ ರಾಣಿಯರ ಸಮಾಗಮ ಅಸಾಧ್ಯವೆಂದಾಗ, ಅವಳು ಅವನಲ್ಲಿ ಈ ಮಂತ್ರಗಳನ್ನು ಪ್ರಸ್ತಾಪಿಸಿ ಮಕ್ಕಳನ್ನು ಪಡೆಯುವಳು. ಮಾದ್ರಿಗೂ ಒಂದು ಮಂತ್ರವನ್ನು ನೀಡುವಳು. ಇಡೀ ಮಹಾ ಭಾರತದ ಉದ್ದಕ್ಕೂ ಮಕ್ಕಳೊಂದಿಗೆ ಕಾಡು–ಮೇಡುಗಳಲ್ಲಿ, ದಾಯಾದಿ ಮತ್ಸರದಲ್ಲಿ ಕುಂತಿ ಅನೇಕ ನೋವುಗಳನ್ನು ಅನುಭವಿಸುವ ಹಿರಿಯ ಜೀವ. ಮಹಾಭಾರತದ ಯುದ್ಧದಲ್ಲಿ ಕರ್ಣನೊಂದಿಗೆ ಮಾತಾಡುವ ಸಂದರ್ಭದಲ್ಲಿ ಅವಳಿಗೆ ಉಭಯ ಸಂಕಷ್ಟ. ಮಾದ್ರಿಯು ಪಾಂಡುರಾಜನೊಂದಿಗೆ ಸಹಗಮನ ಕೈಗೊಳ್ಳುವಳು. ಕುಂತಿ ಮಕ್ಕಳ ಹೊಣೆ ಹೊರುವಳು. ಹೀಗೆ ಕುಂತಿ ಮಕ್ಕಳನ್ನು ಕಟ್ಟಿಕೊಂಡು ಅವರ ಪಾಲನೆ ಪೋಷಣೆ ಮಾಡುವ ಒಬ್ಬ ಧೀಮಂತ ತಾಯಿಯಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸಿದ ಬಗೆ ಕರುಣಾ ಜನಕವಾಗಿದೆ.

ಹಿಡಿಂಬೆಯನ್ನು ರಾಕ್ಷಸಿ ಎಂದು ಉದಾಸೀನ ಮಾಡುವುದುಂಟು. ಆದರೆ ಪಂಪನು ಅವಳ ಕುರಿತು ದೀರ್ಘವಾಗಿಯೇ ವರ್ಣಿಸಿದ್ದಾನೆ. ದುರ್ಯೋಧನನು ನಿರ್ಮಿಸಿದ ಅರಗಿನ ಮನೆಯಿಂದ ತಪ್ಪಿಸಿಕೊಂಡು ಐದು ಜನ ಪಾಂಡವರು ಹಿಡಿಂಬವನಕ್ಕೆ ಹೋಗುವರು. ಅಲ್ಲಿ ಹಿಡಿಂಬ ಮತ್ತು ಹಿಡಂಬೆಯೆಂಬ ಅಣ್ಣ–ತಂಗಿಯರಿದ್ದರು. ನಮಗೆ ಆಹಾರವಾಗಲು ಇವರನ್ನು ಬೇಯಿಸೆಂದು ಅಣ್ಣನು ತಂಗಿಗೆ ಹೇಳಿದ. ಅವಳು ಹಾಗೇ ಮಾಡುವೆನೆಂದು ಪಾಂಡವರಿದ್ದಲ್ಲಿಗೆ ಆಗಮಿಸುವಳು. ಆಕಾಶ–ಭೂಮಿಯೇ ಒಂದೊಂದು ದವಡೆಯನ್ನಾಗಿಸಿಕೊಂಡು ತನ್ನ ಮನೋವೇಗವನ್ನು ಮೀರಿ ಬರುತ್ತಿರುವ ಹಿಡಿಂಬೆಯ ನೋಟವು ಭೀಮನನ್ನು ಸಂಧಿಸಿತು. ಅವಳು ಭೀಮನನ್ನು ನೋಡಿದ ಕೂಡಲೇ ತನ್ನ ರೂಪವನ್ನು ಪರಿವರ್ತಿಸಿಕೊಂಡು, ಸುಂದರ ಕನ್ನಿಕೆಯ ರೂಪವನ್ನು ತಾಳಿ ಅವನಲ್ಲಿಗೆ ಬಂದಳು. ಇವಳನ್ನು ನೋಡಿ ಭೀಮ ಹೀಗೆಂದುಕೊಂಡನು.

ಖೇಚರಿಯೇ ಭೂಚರಿಯೊ ನಿ
ಶಾಚರಿಯೋ ರೂಪು ಬಣ್ಣಿಸಲ್ಕಾರ್ಗಮವಾ ।
ಗ್ಗೋಚರಮೀ ಕಾನನಮುಮ
ಗೋಚರಮಿವಳಿಲ್ಲಿಗೇಕೆ ಬಂದಳೊ ಪೇಳಿಂ ॥
(ಪು.175, ಪಂಭಾ)

ಹೀಗೆ ಹಿಡಿಂಬೆಯ ರೂಪ ಲಾವಣ್ಯ ಸೌಂದರ್ಯದ ಕುರಿತು ಭೀಮನು ಯೋಚನೆ ಮಾಡುತ್ತಿರುವಾಲೇ ಅವಳು ಅವನಲ್ಲಿ ಮೋಹಗೊಂಡು ಅವನ ಪಕ್ಕದಲ್ಲಿ ಬಂದು ಕುಳಿತುಕೊಳ್ಳುವಳು. ಆಗ ಅವನು ನೀನು ಯಾರ ಮಗಳು? ಹೆಸರೇನು? ಏಕೆ ಬಂದಿರುವೆಯೆಂದು ಕೇಳುವನು. ಆಗವಳು "ನಿನ್ನೊಳೆರಡಂ ನುಡಿಯಲಾಗದೆನಗೆ ಯೀ ಬನಂ ಹಿಡಿಂಬವನೆಂಬುದಿದನಾಳ್ವಂ ಹಿಡಿಂಬನೆಂಬರಸಿನೆಮ್ಮಣ್ಣನಾನುಂ ಹಿಡಿಂಬೆಯೆಂನಾತನ ಬೆಸದಿಂ ನಿಮ್ಮನಿಬರುವಮಂ । ಪಿಡಿದಡಸಿ ತಿನಲ್ ಬಂದಿರ್ದೆಡೆಯೊಳ ನಿನಗಾಗಿ ಮದನನೆನ್ನನ ತಿನೆ ಕೇಳ್ । ಪಡೆನೋಡಲ್ ಬಂದವರಂ । ಗುಡಿಹೊರಸಿದರೆಂಬುದಾಯ್ತು ನಿನ್ನೆನ್ನೆಡೆಯೊಳ್ ॥ (ಪು.175–176, ಪಂಭಾ) ನಿನ್ನಲ್ಲಿ ಪ್ರೀತಿಸಿ ಬಂದು ಸುಳ್ಳು ಹೇಳುವುದಿಲ್ಲ. ಈ ಕಾಡು

ಹಿಡಿಂಬ ವನವೆಂದು. ಇದನ್ನು ನನ್ನಣ್ಣ ಹಿಡಿಂಬನೆಂಬ ರಾಕ್ಷಸ ಆಳುತ್ತಿದ್ದಾನೆ. ನನ್ನ ಹೆಸರು ಹಿಡಿಂಬೆ. ಅಣ್ಣನ ಆದೇಶದ ಮೇರೆಗೆ ನಿಮ್ಮೆಲ್ಲರನ್ನು ಹಿಡಿದು ತಿನ್ನಲು ಬಂದಾಗ ನನ್ನನ್ನೇ ಮನ್ಮಥನೇ ನುಂಗಿಬಿಟ್ಟಿದ್ದಾನೆ. ಸೈನ್ಯವನ್ನು ನೋಡಲು ಬಂದವರ ಕೈಯಲ್ಲಿ ಧ್ವಜವನ್ನು ಕೊಟ್ಟಂತಾಗಿದೆ' ನಿನ್ನ ನನ್ನ ಸಂಬಂಧ ಎಂದಳು. ಸ್ವಲ್ಪ ಹೊತ್ತಿನಲ್ಲಿಯೇ ಅವಳ ಅಣ್ಣ ಅಲ್ಲಿಗೆ ಬರುವನು, ಭೀಮ ಮತ್ತು ಹಿಡಿಂಬನ ಮಧ್ಯೆ ಘೋರಕಾಳವಾಗುವುದು. ತಾವರೆಯ ದಂಟನ್ನು ಸೀಳುವ ಹಾಗೆ ಒಂದೇ ಸಲಕ್ಕೆ ಭೀಮನು ಹಿಡಿಂಬನ ದೇಹವನ್ನು ಸೀಳಿ ಹಾಕಿದನು.

ಈ ಯುದ್ಧದ ಕೋಲಾಹಲದಿಂದ ಮಲಗಿದ್ದ ಐವರು ಎದ್ದೇಳುವರು. ಆಗ ಹಿಡಿಂಬೆ ಅವರಿಗೆ "ತದೃತ್ತಾಂತಮೆಲ್ಲಮನರಿಪಿ ಹಿಡಿಂಬೆ ಡಂಬಮಿಲ್ಲದೆ ಭೀಮಸೇನನೊಳಪ್ಪೊಡಂಬಡಂ ನುಡಿಯೆ ಕೊಂತಿಯುಂ ಧರ್ಮಪುತ್ರನುಮೀಕೆ ಸಾಮಾನ್ಯವನಿತೆಯಲ್ಲಿವಳ್ ರಾಕ್ಷಸ ಸ್ತ್ರೀಯೆಂದು ಭಾವಿಸಲ್ವೇಡಿಕೆಯಂ ಕೆಯ್ಕೊಳ್ವುದೆ ಕಜ್ಜಮೆಂದಾಕೆಗಂ ಭೀಮಸೇನಂಗಂ ಗಂಧರ್ವವಿವಾಹಮಂ ಮಾಡಿದೊಡೆ ಹಿಡಿಂಬೆ ನೀಮಿಲ್ಲಿರಲ್ವೇಡ ಪರ್ವತದ ಮೇಲೆ ಕರಂಗಿ ಕಳ್ತಲಿಸಿದ ಮರುದುರುಗಲು ನಡುವೆ ಸುಧಾ ಧವಳಿತೋತ್ತುಂಗ ರಮ್ಯ ಹರ್ಮ್ಯಂಗಳಂ ಕಾಣ್ಬಿರಪ್ಪೊಡದು ಹಿಡಿಂಬಪುರಮೆಂಬುದೆಮ್ಮಪುರಮಲ್ಲಿಗೆ ಪೋಪಂ ಬನ್ನಿಮೆಂದು ಮುಂದಿಟ್ಟೊಡಗೊಂಡು ಪೋಗಿ ಮಹಾವಿಭೂತಿಯಿಂ ಪೊಳಲಂ ಬನ್ನಿಮೆಂದು ತನ್ನ ಸಂಪತ್ತುಮಂ ಶ್ರೀಯುಮಂ ಪೆರೆದು ಮಜ್ಜನ ಭೋಜನ ತಾಂಬೂಲ ಲೇಪನಂಗಳಿಂ ಪಥಪರಿಶ್ರಮಮೆಲ್ಲಮಂ ಕಳೆದು ಭೀಮಸೇನನುಂ ತಾನುಂ (ಪು.177–178, ಪಂಭಾ)

ತನ್ನ ಪ್ರೀತಿಗೆ ಅಣ್ಣನನ್ನೇ ಬಲಿ ಕೊಟ್ಟು, ಭೀಮನೊಂದಿಗೆ ವಿವಾಹವಾಗಿ, ಅವರನ್ನು ತನ್ನ ಅಂತಃಪುರಕ್ಕೆ ಕರೆತಂದ ಹಿಡಿಂಬೆಯ ಮನೋಗತವನ್ನು ಗಮನಿಸಿದರೆ, ಕಾಮಕ್ಕೆ ಕಣ್ಣಿಲ್ಲ ಎಂಬ ಮಾತು ರುಜುವಾತು ಪಡಿಸಿದಂತಿದೆ. ಇಲ್ಲವೆ ಅವಳ ಅಣ್ಣನ ಅನ್ಯಾಯ ಶೋಷಣೆಗಳನ್ನು ಈ ರೀತಿಯಾಗಿ ಪ್ರತಿಭಟಿಸಿದಳೆಂದು ಭಾವಿಸಬಹುದು. ಹಿಡಿಂಬೆ ಭೀಮನೊಂದಿಗೆ ನಡೆಸಿದ ಪ್ರಣಯವನ್ನು ಪಂಪ ಹೀಗೆ ಚಿತ್ರಿಸಿದ್ದಾನೆ.

ಎಲ್ಲಿ ಕೊಳನೆಲ್ಲಿ ತಣ್ಬುಳಿ
ಲೆಲ್ಲಿ ಲತಾಭವನಮಲ್ಲಿ ಧಾರಾಗೃಹಮಂ ।
ತಲ್ಲಿಯೆ ತೊಡರ್ದಲ್ಲಿಯೆ ನಿಂ
ದಲ್ಲಿಯೆ ರಮಿಯಿಸಿದಾಳಾಕೆ ಮರುದಾತ್ಮಜನೊಳ್ ॥
(ಪು.178, ಪಂಭಾ)

ಎಲ್ಲಿ ಕೊಳಗಳಿವೆಯೋ, ತಂಪಾದ ತೋಪುಗಳಿವೆಯೇ, ಬಳ್ಳಿಭವನಗಳಿವೆಯೋ, ಧಾರಾಕಾರವಾಗಿ ನೀರು ಹರಿಯುವವೋ ಅಲ್ಲಲ್ಲಿಯೇ ನಿಂತು–ನೆಲಸಿ ಹಿಡಿಂಬೆಯು ವಾಯುಪುತ್ರನಲ್ಲಿ ಸುಖಿಸಿದಳು. ಇವರ ಪ್ರಣಯದ ಫಲವಾಗಿ ಘಟೋತ್ಕಚನೆಂಬ ಮಗನು ಹುಟ್ಟಿದನು.

ದ್ರೌಪದಿ ಮಹಾಭಾರತಕ್ಕೆ ಕಾರಣವಾದ ಬಹಮುಖ್ಯ ಪಾತ್ರ. ಇವಳ ರೂಪ ಲಾವಣ್ಯ, ಸೌಂದರ್ಯವನ್ನು ಮತ್ತು ಅವಳು ಅನುಭವಿಸುವ ಕಷ್ಟಕಾರ್ಪಣ್ಯಗಳನ್ನು ಕವಿ ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಸಾಧ್ಯಂತ್ಯವಾಗಿ ಚಿತ್ರಿಸಿದ್ದಾನೆ. ಈ ಮೂರು ಲೋಕದ ಸುಪ್ರಸಿದ್ಧ ಸ್ತ್ರೀಯರನ್ನು ಮೀರಿಸುವ ಕಮಲಪತ್ರದಂತೆ ವಿಚಿತ್ರವಾದ ಕಣ್ಣುಳ್ಳ ದ್ರೌಪದಿಯ ಸ್ವಯಂವರಕ್ಕೆ ಭೂಮಿಯ ಮೇಲಿನ ಎಲ್ಲ ರಾಜಕುಮಾರರು ಬಂದರಂತೆ. ರಾಜ ದ್ರುಪದನು ತನ್ನ ಮಗಳಿಗೆ ಅಲಂಕರಿಸಲು ಆದೇಶಿಸಿದನು. ಈತ ಹೇಳುವ ಮುನ್ನವೇ ಅಲ್ಲಿ ನೆರೆದಿದ್ದ ರಾಣಿವಾಸದ ಸ್ತ್ರೀಯರು ಶಕ್ತರೂ, ಅನುಭವಶಾಲಿಗಳೂ ಆದವರು ಹಾಗೆಯೇ ಮಾಡುತ್ತೇವೆಂದರು. ಹಾರ, ಒಡ್ಯಾಣ, ಕಾಲಂದಿಗೆ ಈ ಮುಂತಾದ ಆಭರಣಗಳ ಅಗತ್ಯವೇ ಇಲ್ಲ ಇವಳಿಗೆ, ಶಾರೀರಿಕವಾಗಿ ಅಷ್ಟೊಂದು ಸುಂದರವಾಗಿದ್ದಾಳೆಂದು ನೆರೆದಿದ್ದ ಹೆಂಗಳೆಯರು ಆಡಿಕೊಳ್ಳುತ್ತಿದ್ದರು. ದ್ರೌಪದಿಯನ್ನು ಅಲಂಕರಿಸಿದಾಗ ಅವಳು ಹೇಗೆ ಕಾಣುತ್ತಿದ್ದಳೆಂದು ಅವಳ ಸೌಂದರ್ಯವನ್ನು ಸ್ತ್ರೀಯರು ಹೊಗಳುತ್ತಿದ್ದನ್ನು ಕವಿಯ ಮಾತಿನ್ನಲ್ಲಿ ಹೀಗಿದೆ.

ಮಸೆದುದು ಮದನನನ ಬಾಳ್ ಕೂ
ರ್ಮಸೆಯಿಟ್ಟುದು ಕಾಮನಂಬು ಬಾಯ್ಗೂಡಿದುದಾ ।
ಕುಸುಮಾಸ್ತ್ರನ ಚಕ್ರಮಿದೆಂ
ಬೆಸಕಮನಾಳ್ದತ್ತು ಪಸದನಂ ದ್ರೌಪದಿಯಾ ॥
(ಪು.192, ಪಂಭಾ)

ದ್ರೌಪದಿಯ ಅಲಂಕಾರವು ಮನ್ಮಥನ ಕತ್ತಿಯಂತೆ, ಕಾಮನ ಬಾಣದಂತೆ, ಪುಷ್ಪಬಾಣದ ಅನಂಗನ ಚಕ್ರಾಯುಧದಂತೆ ಸೌಂದರ್ಯ ಪಡೆಯಿತೆಂದು ಕವಿ ಹೇಳಿರುವನು.

ಧರ್ಮರಾಜನು ಜೂಜಿನಲ್ಲಿ ಸಕಲ ಸಂಪತ್ತನ್ನು ಸೋತು ಕೊನೆಗೆ ದ್ರೌಪದಿಯನ್ನೂ ಜೂಜಿನ ಪಣಕ್ಕಿಟ್ಟು ಸೋಲುವನು. ಆ ಸಂದರ್ಭದಲ್ಲಿ ದುರ್ಯೋಧನನ ಆಜ್ಞೆಯ ಮೇರೆಗೆ ದುಶ್ಯಾಸನು ದ್ರೌಪದಿಯ ಮುಡಿಯನ್ನಿಡಿದು ಸಭೆಗೆ ಹಿಡಿದೆಳೆದು ತಂದಾಗ ಅವಳಾಡುವ ಮಾತು ಹೀಗಿದೆ.

ಮುಡಿದಯಂ ಪಿಡಿದೆಳೆದವನಂ
ಮಡುಯಿಸಿ ಮತ್ತವನ ಕರುಳ ಪಿಣಿಲಿಂದೆನ್ನ ।
ಮುಡಿಯಿಸುವಿನೆಗಂ ಮುಡಿಯಂ
ಮುಡಿಯೆಂ ಗಡ ಕೇಳಿಮೀಗಳಾನ್ ನುಡಿ ನಡಿದೆಂ ॥
(ಪು.334, ಪಂಭಾ)

ಅವಳು 'ರಸಜ್ವಲೆಯಾಗಿದ್ದೇನೆ ಮುಟ್ಟಕೂಡದು' ಎಂದು ಪರಿಪರಿಯಾಗಿ ಬೇಡಿದರೂ ಬಿಡದೆ ಅವಳನ್ನು ಬಲತ್ಕಾರದಿಂದ ಸಭೆಗೆ ಎಳೆದಾಗ ಅದಕ್ಕೆ ಪ್ರತೀಕಾರವಾಗಿ ಮುಡಿಯನ್ನು ಹಿಡಿದೆಳೆದವನನ್ನು ಕೊಂದು ಅವನ ಕರುಳಿನ ಜಡೆಯಯಿಂದ ನನ್ನ ಮುಡಿಯನ್ನು ಮುಡಿಯಿಸುವವರೆಗೂ ಆ ಮುಡಿಯನ್ನು ಮತ್ತೆ ಮಡಿಯುವುದಿಲ್ಲವೆಂದು, ನೀವೆಲ್ಲ ಕೇಳಿ ನಾನು ಪ್ರತಿಜ್ಞೆ ಮಾಡಿದ್ದೇನೆಂದಳು. ದ್ರೌಪದಿಗೆ ಮಾಡಿದ ಅವಮಾನಕ್ಕೆ ಪುರುಷರೆಲ್ಲ ಬಾಯಿಬಿಚ್ಚಿ ಮಾತಾಡದೆ ಕುಳಿತಾಗ ಅವಳು ಆಡಿದ ಈ ಮಾತು ನಿಜವಾಗಿಯೂ ಶೋಷಣೆಯನ್ನು ಪ್ರತಿಭಟಿಸುವ ರೋಧನವಾಗಿದೆ.

ಚಿತ್ರಾಂಗದನೆಂಬ ಗಂಧರ್ವನು ತನ್ನ ಸೈನ್ಯದೊಂದಿಗೆ ಬಂದು, ದುರ್ಯೋಧನ, ದುಶ್ಯಾಸನ ಮುಂತಾದವರನ್ನು ಅಪಹರಿಸಿಕೊಂಡು ಹೋಗುವನು. ಆಗ ದುಯೋಧನನ ಮಹಾರಾಣಿಯಾದ ಭಾನುಮತಿಯು ಅಳುತ್ತ ಧರ್ಮರಾಜನ ಕಾಲಿಗೆರಗಿ, ತಾನೆ ಕೊಲ್ಲಬೇಕೆಂದು ವ್ರತಮಾಡುತ್ತಿದ್ದವರ ಹಗೆಯನ್ನು ಎತ್ತು ಇರಿದ ಹಾಗಾಯಿತು ಎಂದು ಸುಮ್ಮನಿರದೆ ಪುರುಷ ಪ್ರಯತ್ನದ ವೈಭವವನ್ನು ಯೋಚಿಸಿ ಹೇಗಾದರೂ ಮಾಡಿ ನನ್ನ ಮಹಾರಾಜನನ್ನು ತಂದು ಕೊಡೆಂದು ಪುರುಷ ಭಿಕ್ಷೆಯನ್ನು ಬೇಡಿದಳು. ಧರ್ಮರಾಜನ ವಿವೇಕದ ಮಾತಿಗೆ ಬೆಲೆಕೊಟ್ಟು ಅರ್ಜುನನು ಅವರೆಲ್ಲರನ್ನು ಬಿಡಿಸಿಕೊಂಡು ಬಂದನು. ಅವರ ಕಟ್ಟುಗಳನ್ನು ಬಿಚ್ಚದೆ ಧರ್ಮರಾಯನಲ್ಲಿ ತಂದು ಅವರನ್ನು ತೋರಿಸಿದನು. ಇದನ್ನು ನೋಡಿ ದ್ರೌಪದಿ ತನ್ನ ಶತ್ರುಗಳು ಬಂದಿಯಾಗಿ ಅವಮಾನಿತರಾದದ್ದನ್ನು ಕಂಡು ಆನಂದಪಟ್ಟಳು. ತನ್ನನ್ನು ಹಿಡಿದು ಎಳೆಯುವಾಗಿದ್ದ ನಿಮ್ಮ ಪರಾಕ್ರಮ ಈಗ ಎಲ್ಲಿ

ಹೋಗಿತ್ತು. ನಿಮಗೂ ಸೋಲುಂಟಾಯಿತೇ ಎಂದು ಅಪಹಾಸ್ಯ ಮಾಡಿ, ಅವರಿಗೆ ಅತೀವ ನೋವುಂಟುಮಾಡುತ್ತಿದ್ದ ಕಟ್ಟಿದ್ದ ಕಟ್ಟುಗಳನ್ನು ಬಿಚ್ಚಿ, ಭಾನುಮತಿಗೆ ಅವರನ್ನು ಒಪ್ಪಿಸಿದಳೆಂದು ಅವಳ ಪ್ರತಿಭಟನೆಯ ಮುಖವನ್ನು ಕವಿ ಚಿತ್ರಿಸಿದ್ದಾನೆ.

**ನಾಗಕನ್ಯೆಯರು:** ಅರ್ಜುನನು ತನ್ನ ಪ್ರಿಯತಮೆಯಾದ ದ್ರೌಪದಿಗೆ ಜೈತ್ರಯಾತ್ರಾ ಪ್ರಯಾಣವನ್ನು ತಿಳಿಸದೆ, ಅವಳು ಮಲಗಿರುವಾಗ ನಡುರಾತ್ರಿಯಲ್ಲಿ ಅವಳ ತೋಳುಗಳಿಂದ ಬಿಡಿಸಿಕೊಂಡು ಮನೆಯಿಂದ ಹೊರಟು ಖಾಂಡವಪ್ರಸ್ಥದಿಂದ ಉತ್ತರಕ್ಕೆ ಸಾಗಿ, ಕಾಮ್ಯಕ ವನದೊಳಗಿನಿಂದ ನೀಲಪರ್ವತದ ಮೇಲೆ ಹೋದನು. ನಂತರ ಹಿಮಾಚಲ ಪರ್ವತಕ್ಕೆ ಸೇರಿದನು. ಗಂಗಾದ್ವಾರವೆಂಬ ಪುಣ್ಯಕ್ಷೇತ್ರಕ್ಕೆ ಬರುವನು. ಅಲ್ಲಿ ತಪಸ್ವಿಗಳ ಯಜ್ಞಕಾರ್ಯಕ್ಕೆ ರಾಕ್ಷಸರು ಹಿಂಸೆಯನ್ನುಂಟು ಮಾಡುತ್ತಿದ್ದರು. ತನ್ನ ಹರಿತವಾದ ಬಾಣಗಳಿಂದ ಅವರ ಉಪಟಳವನ್ನು ತಡೆದನು. ಕೆಲವು ದಿನ ಅರ್ಜುನನು ಅಲ್ಲಿದ್ದನು. ಅಲ್ಲಿರುವಾಗ ಅವನ ಅಂದಕ್ಕೆ ಮನಸೋತ ನಾಗಕನ್ಯೆಯಾದ ಮದನಲತೆಯೆಂಬುವವಳು ಅವನನ್ನು ಮೋಹಿಸಿ, ತನ್ನ ನಾಗಲೋಕಕ್ಕೆ ಕರೆದ್ಯೊಯದಳು. ಆ ನಾಗರ ಮತ್ತು ನಾಗಕನ್ನಿಕೆಗಳ ರೂಪಗಳು ಮನೋಹರವಾಗಿದ್ದವು. ಆದುದರಿಂದಲೇ ಸರ್ಪಗಳು ಭೋಗಿಗಳು ಎನ್ನಿಸಿಕೊಂಡಿವೆ. ಭೋಗಿಗಳೆಂದರೆ ಭೋಗಪಾಲಕರೇ ಎಂದು ಆ ನಾಗಕನ್ನಿಕೆ ಆ ನಾಗಲೋಕದ ವೈಭವಗಳನ್ನು ತೋರಿಸುತ್ತ ಕೆಳಭಾಗದಲ್ಲಿದ್ದ ತನ್ನ ಅಂತಃಪುರಕ್ಕೆ ಬಂದು ತಾನೂ ಆ ನಾಗಕನ್ನಿಕೆಯರೂ ತಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ಅವನಿಗೆ ಸ್ನಾನಮಾಡಿಸಿ ರಸಯುಕ್ತವಾದ ರಸಾಯನಗಳನ್ನು ತಿನ್ನಿಸಿ, ದಿವ್ಯಾಹಾರಗಳನ್ನು ಊಣಿಸಿದರು.

ಆ ನಾಗಕನ್ನಿಕೆಯು ಅರ್ಜುನನನ್ನು ನಾಗರ ಒಡವೆಗಳ ಸಮೂಹ, ನಾಗರ ಖಂಡವೆಂಬ ಪ್ರದೇಶ, ಅಪೂರ್ವವಾದ ಪುನ್ನಾಗ ಪುಷ್ಪಗಳ ಹಾರ, ಬಗೆಬಗೆಯ ವಸ್ತ್ರಗಳು, ನಾಗದವಲ್ಲಿ ಮೊದಲಾದ ನಾಗಲೋಕದ ವೈಭವಗಳಲ್ಲಿ ಮುಳುಗಿಸಿ ನಾಗಶಯೆಯಲ್ಲಿ ನಾಗಬಂಧವೆಂಬ ರತಿಬಂಧದಲ್ಲಿ ಸೇರಿಕೊಂಡು ಮರುಳು ಮಾಡಿದಳು. ಆಕೆಯ ಮುದ್ದಿನಿಂದ ಕೂಡಿದ ಲಲೆಮಾತಿಗೂ ಹೂಮಾಲೆಯಿಂದ ಕೂಡಿದ ಜೋಲಾಡುತಿರುವ ತುರುಬಿಗೂ ಪ್ರೀತಿಯಿಂದ ಕೂಡಿದ ನೋಟಕ್ಕೂ ಸುಖಮಯವಾದ ಕೂಡುವಿಕೆಗೂ ಸ್ಪರ್ಧೆಯಿಂದ ಕೂಡಿದ ವಕ್ರತೆಗೂ ಬಿಗಿದಪ್ಪಿದ ಆಲಿಂಗನಕ್ಕೂ ಸೌಂದರ್ಯದಿಂದ ಕೂಡಿದ ಶೃಂಗಾರ ಚೇಷ್ಟೆಗೂ ನಾಚಿಕೆಯಿಂದ ಕೂಡಿದ ಭಾವಗಳಿಗೂ ಒಲಿದು ಪ್ರೀತಿಸಿರಲು ದೇವಂದ್ರನಿಗೂ ಶಚಿದೇವಿಗೂ ಜಯಂತನು ಹುಟ್ಟುವ ಹಾಗೆ ಆ ಕನ್ನಿಕೆಗೂ ಅರ್ಜುನನಿಗು ಇಳಾವಂತನೆಂಬ ಮಗನು ಜನಿಸಿದನು. (ಪು.216, ಪಂಭಾ) ಹೀಗೆ ನಾಗಕನ್ನಿಕೆಯರ ಐಭೋಗ, ರತಿರಮಣೀಯತೆಯ ಸೌಂದರ್ಯವನ್ನು ಪಂಪನು ವಿಶೇಷವಾಗಿ ವರ್ಣಿಸಿರುವನು.

ಪಂಪಭಾರತದಲ್ಲಿ ಸುಭದ್ರೆಯನ್ನು ಅರ್ಜುನನು ಪ್ರೀತಿಸಿ ವಿವಾಹವಾಗುವನು. ಅವಳ ಅತಿಶಯವಾದ ಸೌಂದರ್ಯವನ್ನು ಮನದುಂಬಿ ವರ್ಣಿಸಿದ್ದಾನೆ.

ಆದಿಪುರಾಣದಲ್ಲಿ ಬ್ರಾಹ್ಮಿ, ಸುಂದರಿ, ಮನೋಹರಿ, ವಿದ್ಯಾಧರ ಸ್ತ್ರೀಯರು, ವಿಜಯಿ, ಸುಂದರಿ, ದೇವಸ್ತ್ರೀ, 500 ಅರಸಿಯರು, ನಾಲ್ಕು ಸಾವಿರ ಮನದನ್ನೆಯರು, ಸ್ವಯಂಪ್ರಭೆ, ಕನಕಮಾಲೆ, ಕನಕಲತೆ, ವಿದ್ಯುಲ್ಲತೆ, ಅಮರಸ್ತ್ರೀಯರು, ಅಪ್ಸರಸ್ತ್ರೀಯರು, ಸ್ವಯಂಪ್ರಭೆ, ಶ್ರೀಮತಿ, ಪಂಡಿತೆ, ವಸುದತ್ತೆ, ವಸುಮತಿ, ಪ್ರಭಾವತಿ, ಸುಪ್ರಭೆ, ಸತ್ಯಭಾಮೆ, ಜಯವತಿ, ಜಯಸೇನೆ, ವಸುಂಧರೆ, ವಸುಮತಿ, ಅಮರಾಂಗನೆಯರು, ಸಾಮಂತರಾಜರ ಸ್ತ್ರೀಯರು, ಅತಿಪ್ರೌಢ ವಾರವನಿತೆಯರು, ಸ್ತ್ರೀರತ್ನ, ಅನುಂದರಿ, ವಾರಾಂಗನೆಯರು, ವಿಲಾಸಿನಿಯರು, ಅವರತ್ತು ಸಾವಿರ ಸ್ತ್ರೀಯರು, ರಾಜಸ್ತ್ರೀಯರು, ಅನಂತಮತಿ, ಧನದತ್ತೆ, ಧನಮತಿ, ವಸಂತಸೇನೆ, ಸುಂದರನಂದೆ, ಮನೋರಮೆ, ಚಂದ್ರಮತಿ, ಚಿತ್ರಮಾಲೆ, ಶ್ರೀಕಾಂತೆ, ಮರುದೇವಿ, ಪುರವನಿತೆಯರು, ವಾರಾಂಗಾನಗಣ, ಅಮರ ಸ್ತ್ರೀಯರ ನೃತ್ಯ, ದೇವಾಂಗನೆಯರ ನೃತ್ಯ, ಸುರಾಂಗನೆಯರ ಮಧುರಗೀತೆ ಮತ್ತು ಕುಣಿತ, ಇಂದ್ರಾಣಿ, ಗಣಿಕೆಯರು, ಕಿನ್ನರ ಸ್ತ್ರೀಯರು, ದೇವಗಣಿಕೆಯರ ನೃತ್ಯ, ವೀರವನಿತೆಯರು, ದಿವ್ಯಸ್ತ್ರೀಸಮೂಹ, ಯಶಸ್ವತೀ, ಸುನಂದೆ, ದೇವಸ್ತ್ರೀ, ಮಾನವಸ್ತ್ರೀ, ಮತ್ಸ್ಯಸ್ತ್ರೀ, ಸುರಾಂಗನೆಯರು, ನರಾಂಗನೆಯರು, ನೀಳಾಂಜನೆ, ವಾರಸ್ತ್ರೀ, ಹೀಗೆ ಈ ಮುಂತಾದ ಮಹಿಳಾಮಣಿಗಳ ರೂಪ, ಲಾವಣ್ಯ, ವಿಲಾಸ, ವಿಭ್ರಮಗಳನ್ನು ಅತಿಶಯವಾದ ಸೌಂದರ್ಯವನ್ನು, ಸೊಬಗನ್ನು, ಅವರ ವಿವೇಚನಾ ಮತಿಯನ್ನು, ಕುಶಲತೆಯನ್ನು, ಜಾಣ್ಮೆಯನ್ನು, ಸಂಗೀತ, ಗಾಯನ, ನೃತ್ಯ, ಚಿತ್ರಕಲೆಯನ್ನು ಈ ಮುಂತಾದ ಅವರ ಗುಣಲಕ್ಷಣಗಳನ್ನು ಆಯಾ ಸ್ತ್ರೀ ಪಾತ್ರಗಳಲ್ಲಿ ಅತ್ಯಂತ ತನ್ಮಯನಾಗಿ ಪಂಪ ಚಿತ್ರಿಸಿದ್ದಾನೆ. ಆದಿನಾಥ ಮತ್ತು ರಾಜರುಗಳ ಚರಿತ್ರೆಯಲ್ಲಿ, ಭರತನ ರಾಜ್ಯದಲ್ಲಿ ಎಲ್ಲಿ ನೋಡಿದರೂ ಅನೇಕ ಬಗೆಯ, ಸ್ತ್ರೀರತ್ನಗಳೇ ಸಹೃದಯರ ಮನಸ್ಸಿಗೆ ಮುಟ್ಟುವಂತೆ ಸಜೀವ ಕಳೆಯಾಗಿ ಸುಳಿದಾಡುವಂತೆ ಕವಿ ವರ್ಣಿಸಿದ್ದಾನೆ.

ಪೊನ್ನನು ತನ್ನ ಶಾಂತಿಪುರಾಣದಲ್ಲಿ ವಸುಂಧರೆ, ವಸುಮತಿ, ಸುಮತಿ, ದೇವತೆ, ವಾಯುವೇಗೆ, ಸ್ವಯಂಪ್ರಭೆ, ಜ್ಯೋತಿರ್ಮಾಲೆ, ಸುತಾರೆ, ಜ್ಯೋತಿಃಪ್ರಭೆ, ಸತ್ಯಭಾಮೆ, ವಸಂತಸೇನೆದಾಸಿ, ವಿದ್ಯನ್ಮತಿ, ಕನಕಶ್ರೀ, ಪದ್ಮಾವತಿ, ಪದ್ಮಲತೆ, ಕನಕಲತೆ, ಸಿಂಹನಂದೆ, ಶ್ರೀಪ್ರಭೆ, ಪ್ರಿಯಕಾರಿಣಿ, ಕನಕಮಲೆ, ಸಂಸಸೇನೆ, ಪ್ರಿಯಮಿತ್ರೆ, ಸುಮತಿ, ಪೃಥ್ವೀಸೇನೆ, ದೇವಾಂಗನೆಯರು, ಐರಾಮಹಾದೇವಿ, ಬರ್ಬರ, ಕಿರಾತೆ ಹೀಗೆ ಈ ಮುಂತಾದ ಮಹಿಳಾಪಾತ್ರಗಳು ಬರುತ್ತವೆ. ಜೈನಧರ್ಮದ ಉಪದೇಶ,ಸಿದ್ಧಾಂತಗಳನ್ನು ಮೈಗೂಡಿಸಿಗೊಂಡ ಪಾತ್ರಗಳ ಕೊನೆಯ ಗುರಿ ಮೋಕ್ಷವನ್ನು ಸಾಧಿಸುವುದಾಗಿದೆ. ರಾಜನ ರಾಣಿಯರು, ರಾಜನು ವೈರಾಗ್ಯ ತಾಳಿದರೆ ಅವರು ಅವನೊಂದಿಗೆ ಜಿನದೀಕ್ಷೆಯನ್ನು ಹೊಂದುವುದು ಹೆಚ್ಚಾನುಹೆಚ್ಚು ಸ್ತ್ರೀಯರಲ್ಲಿ ಕಾಣುತ್ತೇವೆ.

ರನ್ನನು ಅಜಿತತೀರ್ಥಂಕರ ಪುರಾಣ ತಿಲಕ ಮತ್ತ ಸಾಹಸಭೀಮವಿಜಯದಲ್ಲಿ ಚಾರಿತ್ರಿಕ ಮತ್ತು ಪುರಾಣದ ಮಹಿಳೆಯರನ್ನು ವರ್ಣಿಸಿದ್ದಾನೆ. "ರನ್ನನು ಕನ್ನಡ ಸಾಹಿತ್ಯ ಕಂಡ ಸ್ತ್ರೀವಾದಿ ಕವಿಗಳಲ್ಲಿ ಅಗ್ರಗಣ್ಯನು ಮತ್ತು ಪ್ರಥಮಿಗನು. ಸ್ತ್ರೀವಾದದ ದನಿ ಜಾಗತಿಕ ವೇದಿಕೆಗಳಲ್ಲಿ ಮೊಳಗದ ದಿನಮಾನಗಳಲ್ಲಿ, ಅಂಥದೊಂದು ಪರಿಕಲ್ಪನೆ ಇನ್ನೂ ಭ್ರೂಣಾವಸ್ಥೆಗೂ ಇಳಿದಿರುವ ಕಾಲದಲ್ಲಿ, ಸ್ತ್ರೀವಾದ ಸೌಧಕ್ಕೆ ಕೆಸರ್ಗಲ್ಲು ಕಲಸಿಟ್ಟ ಪ್ರಥಮ ಲೇಖಕ ರನ್ನ" (ಪು.xxxiii ರನ್ನ ಸಂಪುಟ) ಈ ಮಾತಿಗೆ ಕನ್ನಡಿಯಂತೆ ಅವನು ಚಿತ್ರಿಸಿದ ಅತ್ತಿಮಬ್ಬೆಯ ವ್ಯಕ್ತಿತ್ವವೇ ಸಾಕ್ಷಿಯಾಗಿದೆ.

ಚಾರಿತ್ರಿಕ ಪಾತ್ರವೂ, ತನಗೆ ಆಶ್ರಯದಾತೆಯಾದ ಅತ್ತಿಮಬ್ಬೆಯನ್ನು ಕುರಿತು ಬಹಳ ದೀರ್ಘವಾಗಿ ಮತ್ತು ಅಭಿಮಾನದಿಂದ ಅವಳ ಗುಣಶೀಲತೆಯನ್ನು, ಜಿನಭಕ್ತಿಯನ್ನು, ಧರ್ಮಕಾರ್ಯಗಳನ್ನು ದಾಖಲಿಸಿದ್ದಾನೆ. ತರ್ದವಾಡಿಯ ಮಹಾಸಾಮಂತನಾಗಿದ್ದ ತೈಲಪನಲ್ಲಿ ಮಲ್ಲಪಯ್ಯ ಮತ್ತು ಅವನ ತಮ್ಮ ಪುನ್ನಮಯ್ಯ ಸೇನಾನಿಗಳಾಗಿದ್ದರು. ಪುಂಗನೂರಿನಲ್ಲಿದ್ದ ಮಲ್ಲಪಯ್ಯನ ಮಕ್ಕಳಾದ ಅತ್ತಿಮಬ್ಬೆ ಮತ್ತು ಗುಂಡಮಬ್ಬೆಯರನ್ನು ತೈಲಪನ ದಳಪತಿಯಾಗಿದ್ದ ಧಲ್ಲಪನ ಮಗನಾದ ನಾಗದೇವನಿಗೆ ಕೊಟ್ಟು ವಿವಾಹ ಮಾಡಿಕೊಡಲಾಯಿತು. ರನ್ನಕವಿಯು ತನ್ನ ಅಜಿತತೀರ್ಥಂಕರ ಪುರಾಣದಲ್ಲಿ ಸಮಕಾಲೀನ ಐತಿಹಾಸಿಕ ವ್ಯಕ್ತಿಗಳ ಗುಣವಿಶೇಷಗಳನ್ನು ಸಾರುವಾಗ ಅತ್ತಿಮಬ್ಬೆ ಮತ್ತು

ಗುಂಡಮಬ್ಬೆಯರ ಪ್ರತಿವ್ರತಾಧರ್ಮ, ಸತಿಧರ್ಮವನ್ನು ಕೊಂಡಾಡಿದ್ದಾನೆ. ಅಲ್ಲದೆ ಅತ್ತಿಮಬ್ಬೆಯ ಜಿನಭಕ್ತಿಯನ್ನು, ಜೈನಧರ್ಮಪರ ಕಾರ್ಯಗಳನ್ನು ಅತಿಶಯವಾಗಿ ಹೊಗಳಿ ವರ್ಣಿಸಿರುವನು.

"ಅತ್ತಿಮಬ್ಬೆಯುಂ ಗುಂಡಮಬ್ಬೆಯುಂ ನಾಗಿಯಬ್ಬೆಯುಮೆಂಬ ಕನ್ಯಾರತ್ನಂಗಳುಂ ಪುಟ್ಟೆ." (ಪು.9, ಅತೀಪು) ಈ ಮೂರುಜನ ಹೆಣ್ಣುಮಕ್ಕಳನ್ನು ಕನ್ಯಾರತ್ನಗಳೆಂದು ಕರೆದಿರುವನು. ಹೆಣ್ಣನ್ನು ರತ್ನಕ್ಕೆ ಹೋಲಿಸಿರುವುದು ರನ್ನನ ಸ್ತ್ರೀಪರ ನಿಲುವು ಎಂಥದ್ದೆಂಬುದು ತಿಳಿಯುತ್ತದೆ. ಮುಂದುವರೆದು ಅವಳ ಗುಣಗಾನ ಹೀಗೆ ಮಾಡಿರುವನು. "ನಾಗದೇವನೆಂಬ ಪುರುಷರತ್ನಕ್ಕೆ ರತ್ನತ್ರಯಾಲಂಕೃತೆಯುಂ ದಾನಚಿಂತಾಮಣಿಯುಂ ಚಾರಿತ್ರಮೇರುವುಂ ಗುಣದಂಕಕಾರರ್ತಿಯುಂ ಭವ್ಯಮನೋರಥಜನ್ಮ ಭೂಮಿಯುಂ ಕವಿವರಕಾಮಧೇನುವುಂ ಜಿನಧರ್ಮಪತಾಕೆಯುಂ ಮಹಾಸತೀಕುಲ ತಿಲಕೆಯುಮೆನಿಸಿದತ್ತಿಮಬ್ಬೆಯುಂ ಪತಿವ್ರತಾಗುಣಮಂಡನಮಂಡಿಕೆಯೆನಿಸಿದ ಗುಂಡಮಬ್ಬೆಯುಮೆಂಬ ಕನ್ಯಾರತ್ನದ್ವಯಮಂ ಕೊಟ್ಟನಿಬರುಂ ಸುಖಮಿರೆ ಮಲ್ಲಪತನೂಜಂ" (ಪು.9, ಅತೀಪು) ಕುಲವಧುವಾದವಳಿಗೆ ಪತಿಯ ಸಮಕ್ಷದಲ್ಲಿ ಜಿನದೀಕ್ಷೆಯನ್ನು ಕೈಗೊಳ್ಳುವುದು, ಪತಿಯೊಂದಿಗೆ ಸಹಗಮನ ಕೈಗೊಳ್ಳುವುದು ಈ ಎರಡೆ ಆಚರಣೆಗಳನ್ನು ಅನುಸರಿಸಬೇಕಾದದ್ದು ಎಂದು ಕವಿ ಗುಂಡಮಬ್ಬೆಯ ಬಾಯಿಂದ ಹೇಳಿಸಿದ್ದಾನೆ. ನಾಗದೇವನು ಯುದ್ಧಲ್ಲಿ ಮಡಿದಾಗ ತಾನು ಅವನೊಂದಿಗೆ ಸತಿಹೋಗುವುದಾಗಿ, ನೀನು ಮಗನ ಪಾಲನೆ, ಜಿನಭಕ್ತಿಯಾಚರಣೆ ಮಾಡಿಕೊಂಡಿರು ಎಂದು ತನ್ನಕ್ಕ ಅತ್ತಿಮಬ್ಬೆಗೆ ಬದ್ಧಾಂಜಲಿಯಾಗಿ ಹೇಳುವಳು.

ನಾಗದೇವನು ವೈರಿಗಳ ದಾಳಿಯಲ್ಲಿ ರಣರಂಗದಲ್ಲಿ ಮಡಿದಾಗ, ಅವನ ಎರಡನೆಯ ಹೆಂಡತಿ ಗುಂಡಮಬ್ಬೆ ಇನಿಯನೊಡನೆ ಚಿತಾಮಣಿ ಏರಿ ಸಹಗಮನ ಕೈಗೊಂಡು 'ಸತಿಯೆನಿಸಿದಳು' "ಮೃತ್ಯುಮುಖಿಯಾಗಿ ಹೊರಟ ಗುಂಡಮಬ್ಬೆ ಮಹಾಭಾರತದ ಮಾದ್ರಿಯಾದರೆ ಜೀವನಾಭಿಮುಖಿಯಾಗಿ ಹೊರಳಿ ನಿಂತ ಅತ್ತಿಮಬ್ಬೆ ಕುಂತಿಯಾದಳು. ತನ್ನ ಗಂಡ ಶೈವ ಸಂಪ್ರದಾಯಕ್ಕೆ ಅನುಗುಣಾಗಿ, ಆತನ ಪರೋಕ್ಷ ವಿನಯಕ್ಕಾಗಿ ಸಿಂದವುಗೆಯಲ್ಲಿ ನಾಗೇಶ್ವರ ಶಿವಾಲಯವನ್ನು ಕಟ್ಟಿಸಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದಳು. ತಾಯಿ–ಮಗ (ಅಣ್ಣಿಗದೇವ) 990 ಸರ್ವಧಾರಿ ಸಂವತ್ಸರ ಮಾಘಶುದ್ಧ ತ್ರಯೋದಶಿ ಸೋಮವಾರ ನಾಗೇಶ್ವರ ದೇಗುಲಕ್ಕೆ ತಳವೃತ್ತಿಯಾಗಿ ಒಟ್ಟು (600) ಆರನೂರು ಮತ್ತರು ಭೂಮಿಯನ್ನು (15) ಹದಿನೈದು ಗದ್ಯಾಣವನ್ನು ದಾನವಿತ್ತರು." (ಪು.xxxii ರನ್ನ ಸಂಪುಟ) ಇದರಿಂದ ತಿಳಿಯುವುದೇನೆಂದರೆ, ಅತ್ತಿಮಬ್ಬೆ ಕೇವಲ ಜಿನಭಕ್ತಿಗೆ ಸೀಮಿತವಾಗಿರಲಿಲ್ಲ. ಪರಧರ್ಮಸಹಿಷ್ಣುತೆಯೂ ಆಗಿದ್ದಳೆಂಬುದು ಗಮನಾರ್ಹ.

ಆಸಬಡೆದಳ ನೂರ್ಮಡಿ ತೈಲಪನ ಪಡೆವಳ ತೈಲಪನ
ಜನನಿಗೆ ಪೆರರೊಳರೇ (ಪು.11, ಅತೀಪು)
ದಶದಿಗ್ವಳಯದೊಳನಳಿನ
ಯಶಮಸೆವಿನಮತ್ತಿಬ್ಬೆ ಜಿನಧರ್ಮದಯಾ
ವಶವರ್ತಿ ದಾನಂ ಮೂ
ಜೆ ಶೀಲಮುಪವಾಸಮೆಂಬಿವಂ ಪ್ರಕಟಿಸಿದಳು
(ಪು.11–112, ಅತೀಪು)

ಬುಧಜನನಂದಿತೆ ಧರ್ಮ
ಪ್ರಧಾನ ದರ್ಶನವಿಶುದ್ಧೆ ದಾಗುಣ್ಯೈಕಾಂ
ಬುಧಿಯೆನಿಸಿದ ಕವಿವರಕಾ
ಮಧೇನುವೆಂದೆಂಬುದತ್ತಿಮಬ್ಬೆಯನೆ ಜಗಂ (ಪು.12, ಅತೀಪು)
ಜನಪದಭಕ್ತೆ, ಚಕ್ರವರ್ತಿಪೂಜಿತೆ, ತೈಲಪನ ಜನನಿ,
ಜಿನಶಾಸನದೀಪಿಕೆಯುಮೆನಿ ಮಣಿಕನಕಮಯೋದ್ಭಾಸಿ
ಜಿನಪ್ರತಿಮೆಗಳಂ । ಸಾಸಿರದಯ್ನೂರನರ್ತಿಯಿಂ ಮಾಡಿಸದಳ
(ಪು.12. ಅತೀಪು)

ದಾನಚಿಂತಾಮಣಿ
ಗುಣದಂಕಕಾರ್ತಿ ಮೊನೆಯೊಳ್ ಮನೆಯೊಳ್
ಮೊಲೆವೊತ್ತ ತೈಲಜನನಿಯ
ಕೆಲದೊಳ್ ರಂಜಿಪರೆ ಮೀಸೆವೊತ್ತಣಣಂಗಳ್ (ಪು.13. ಅತೀಪು)

ಮಹಾಸತಿ, ಜಿನಧರ್ಮ ಪತಾಕೆ ಹೀಗೆ ರನ್ನನು ಅತ್ತಿಮಬ್ಬೆಯನ್ನು ಮನದುಂಬಿ ಹೊಗಳಿದ್ದಾನೆ. ಪತಿಯ ವಿಯೋಗದಿಂದ ಅವಳು ದುಃಖಿಸುತ್ತ ಮನೆಯಲ್ಲಿ ಕೂಡಲಿಲ್ಲ. ಜನಪರ ಕಾರ್ಯಗಳನ್ನು ಕೈಗೊಂಡು, 1501 ಜಿನಬಸದಿಗಳನ್ನು, 1500 ಜಿನಪ್ರತಿಮೆಗಳನ್ನು ಮಾಡಿಸಿದಳು. ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಮಾಡಿಸಿ, ರನ್ನನಿಂದ ಅಜಿತತೀರ್ಥಂಕರ ಕಾವ್ಯವನ್ನು ಬರೆಯಿಸಿ, ಸಾವಿರಾರು ಪ್ರತಿಗಳನ್ನು ಮಾಡಿಸಿ ಶಾಸ್ತ್ರದಾನವನ್ನು ಮಾಡಿದಳು. ಕವಿಗಳಿಗೆ ಆಕೆಯ ಮನೆ ತವರು ಮನೆಯಾಗಿತ್ತು. ಪಂಡಿತಮಂಡಳಿಗೆ ಆಕೆಯ ಮನೆ ಮಹಾಮಂಟಪ, ಆಹಾರದಾನ, ಅಭಯದಾನ, ಔಷಧದಾನಗೈದಳು. ಹೀಗೆ ನಾಲ್ಕು ದಾನಗಳನ್ನು ಮಾಡಿ ದಾನಚಿಂತಾಮಣಿ ಎಂಬ ಚಕ್ರವರ್ತಿ ಪ್ರಶಸ್ತಿ ಭೂಷಿತೆಯಾದಳು. ಗಾಯಕರಿಗೆ, ಸಂಗೀತಗಾರರಿಗೆ, ಶೂರರಿಗೆ, ನೃತ್ಯಗಾರರಿಗೆ, ಕವಿಗಳಿಗೆ, ಪಂಡಿತರಿಗೆ ಬೇಕಾದದನ್ನು ನೀಡಿ ಗೌರವಿಸಿದಳು. ಅಜಿತತೀರ್ಥಂಕರ ಪುರಾಣದಲ್ಲಿ, ತೀರ್ಥಂಕರನ ತಾಯಿ, ತೈಲಪನ ತಾಯಿ ಎಂದು, ಅಂಕದರೋಹಿಣಿಯಕ್ಷಿ ಎಂದು ಕವಿ ಕರೆದಿದ್ದಾನೆ. ಈಕೆಯ ಹೆಸರು ಹೇಳಿದರೆ, ಕೇಳಿದರೆ ಪಾಪ ದೂರಾಗಿ ಮಂಗಳ ಮೈದೋರುವುದೆಂದು ಅವರ ವ್ಯಕ್ತಿತ್ವದ ಪಾವಿತ್ರ್ಯತೆಯನ್ನು ನಿರೂಪಿಸಿರುವನು.

ನಾಗಚಂದ್ರ (ಅಭಿನವಪಂಪ) ನು ರಾಮಾಯಣದ ಕಥಾ ವಸ್ತುವನಿಟ್ಟುಕೊಂಡು ಕಾವ್ಯ ಬರೆದ ಮೊದಲಿಗ. ರಾಮಚಂದ್ರಚರಿತ ಪುರಾಣ ಮತ್ತು ಮಲ್ಲಿನಾಥ ಪರಾಣ ಅವನ ಕೃತಿಗಳು. ರಾಮಚಂದ್ರಚರಿತ ಪರಾಣದಲ್ಲಿ ಚಿತ್ರಿತವಾದ ಮಹಿಳೆಯರು ಸಾಮಾನ್ಯವಾಗಿ ರಾಮಾಯಣದ ಪಾತ್ರಗಳೇ ಆಗಿವೆ. ಆದರೆ ಅವನು ತನ್ನ ಪ್ರತಿಭೆ ಮತ್ತು ಸ್ವಂತಿಕೆಯಿಂದ ಜೀವ ತುಂಬಿರುವುದು ಅವನ ಹೆಚ್ಚುಗಾರಿಕೆಯಾಗಿದೆ. ಗುಣೋದೆ, ಸಹದೇವಿ, ವಸಂತಮಾಲೆ, ಕೈಕೇಯ, ಅಪರಾಜಿತೆ(ಕೌಸಲ್ಯೆ), ಸುಮಿತ್ರೆ, ಸುಪ್ರಭೆ, ವಿದೇಹಿ, ಸೀತೆ, ಮನಸ್ವಿ, ಚಿತ್ತೋತ್ಸವೆ, ಚಂದ್ರನಖಿ, ವಿಶಲ್ಯಸೌಂದರಿ, ಮಂಡೋದರಿ, ಶೀಲವತಿ, ಶಶಿಮಾಲೆ ಈ ಮುಂತಾದ ಮಹಿಳಾ ಪಾತ್ರಗಳು ಪಂಪರಾಮಾಯದಲ್ಲಿ ವರ್ಣಿತವಾಗಿವೆ.

ರಾಮಚಂದ್ರಚರಿತ ಪುರಾಣದಲ್ಲಿ ಕೈಕೇಯ, ಸೀತೆ, ಮಂಡೋದರಿ ಇವು ಮಹತ್ವದ ಪಾತ್ರಗಳಾಗಿವೆ. ಸೀತೆಯಂತೂ ಇಡೀ ಕಾವ್ಯದ ಕೇಂದ್ರ ಬಿಂದುವಾಗಿದ್ದಾಳೆ. ಅವಳ ಜನನ, ಬಾಲ್ಯ ವಿವರಗಳನ್ನು ಕವಿ ಉತ್ಸಾಹದಿಂದ ವಿವರಿಸಿರುವನು. ಸೀತೆಯ ಪಾತ್ರವು ಗುಣಸಂಪನ್ನತೆಗೆ, ಸರಳ ನಡೆ, ಪತಿವ್ರತಧರ್ಮಪಾಲನೆಯಿಂದ ಅವಳು ಗೌರವ ಹುಟ್ಟಿಸುವ, ಅಂತಃಕರಣ ಮಿಡಿಯುವಂತವಳಾಗಿರುವಳು. ಅವಳ ಸ್ವಯಂರವನ್ನು ಕವಿ ತುಂಬ ನಾಜೂಕಿನಿಂದ ವರ್ಣಿಸಿದ್ದಾನೆ. ಅವಳ ರೂಪ, ಲಾವಣ್ಯ, ಸೌಂದರ್ಯ, ಸೊಬಗುಗಳು ಎಂಥವರನ್ನು ಬೆರಗು ಗೊಳಸುವಂತವು. ರಾಮನೊಂದಿಗೆ ವನವಾಸ, ಕಷ್ಟ ನೋವುಗಳನ್ನು ಸಮಾನ ಭಾವದಿಂದ ಸ್ವೀಕರಿಸುವಳು. ರಾವಣ ಅವಳನ್ನು ಕದ್ದು

ಹೊಯ್ದಾಗ ಅವಳು ಅನುಭವಿಸುವ ಮಾನಸಿಕ ತೊಳಲಾಟ ವಿಪರೀತವಾದದ್ದು. ಆದರೂ ಅವಳು ತನ್ನ ಪತಿವ್ರತಾಧರ್ಮ ಬಿಡದೆ, ರಾವಣನ ಮನಸ್ಸನ್ನು ಪರಿವರ್ತಿಸುವಲ್ಲಿ ಯಶಸ್ವಿಯಾಗುವಳು. ವನವಾಸ ಅನುಭವಿಸುವುದೇ ಅವಳ ಆದ್ಯಕರ್ತವ್ಯದಂತಾಗಿದೆ. ಅವಳ ಜೀವನದಲ್ಲಿ. ರಾಮನೊಂದಿಗೆ ವನವಾಸ, ರಾವಣ ಕದ್ದಾಗ್ಯೂ ಅಶೋಕವನದ ವಾಸ, ಮತ್ತೆ ರಾಮ ಅವಳನ್ನು ಪರಿತ್ಯಾಗ ಮಾಡಿ ಅರಣ್ಯಕ್ಕೆ ಕಳಿಸುವುದು. ಹೀಗೆ ಪ್ರತಿಯೊಂದು ಅವಳಿಗೆ ರೋಧನದ ನೆಲೆಗಳೆ ಆಗಿವೆ. ಮಂಡೋದರಿಗೆ ಸತಿಧರ್ಮದ ಸೂಕ್ಷ್ಮಗಳನ್ನು ತಿಳಿಸಿದ ಮಹಾಸತಿಯೆನಿಸಿಕೊಳ್ಳುವಳು. ಅರಣ್ಯದಲ್ಲಿ ಅವಳು ಮಾಡುವ ಪ್ರಲಾಪ ಕರುಳು ಮಿಡಿಯುವಂತೆ ಕವಿ ಚಿತ್ರಿಸಿದ್ದಾನೆ.

ನಯಸೇನನ ಧರ್ಮಾಮೃತದಲ್ಲಿ ಬರುವ ಸ್ತ್ರೀಪಾತ್ರಗಳು ಹೀಗಿವೆ. ಸೌಂದರಿ, ಅನಂಗಸೌಂದರಿ, ಅನಂತಮತಿ, ಅಂಗಮತಿ, ಪ್ರಭಾವತಿ, (ಶೀಲವತಿ), ರೇವತಿ, ವಚನಶ್ರೀವನಿತೆ, ನಿರ್ವಾಣಶ್ರೀವನಿತೆ, ಪುಷ್ಪವತಿ, ಸುದಂತಿ, ಯಜ್ಞದತ್ತೆ, ಮಣಿಮಾಲೆ, ಪವನವೇಗೆ, ಸೌಂದರಿ, ಅನಂಗಮಾಲೆ, ವಿಜಯೆ, ಅನಂಗಸೌಂದರಿ, ಸುಪ್ರಭೆ, ವಿದ್ಯುದ್ವೇಗೆ, ವಿಜಯಾವತಿ, ರತ್ನಸೌಂದರಿ, ವಿದ್ಯಾಧರಿ, ಓಹಿಲೆ, ಧನದೆ, ಬುದ್ಧದಾಸಿ, ಲಕ್ಷ್ಮೀಮತಿ, ಧನಶ್ರೀ, ಸುಬಂಧಶ್ರೀ, ಜಿನೇಂದ್ರದಾನಿ, ಅನಂತಶ್ರೀ, ವಾಸವದತ್ತೆ, ಧಾರಣಿದೇವಿ, ಚಂದ್ರಲೇಖೆ, ಪದ್ಮಾವತಿ, ಪ್ರಭಾವತಿ, ಸುಪ್ರಭೆ, ಕನಕಪ್ರಭೆ ಈ ಮುಂತಾದ ಅತ್ಯಂತ ಸುಂದರವಾದ ಸ್ತ್ರೀಪಾತ್ರಗಳನ್ನು ಕವಿ ರೂಪಿಸಿದ್ದಾನೆ. ಇವುಗಳ ರೂಪ, ಲಾವಣ್ಯ, ಸೌಂದರ್ಯ, ಸೊಬಗನ್ನು ಕಣ್ಮನ ಸೆಳೆಯುವಂತೆ ವರ್ಣಿಸಿದ್ದಾನೆ. ಸುಂದರ ಸ್ತ್ರೀಯನ್ನು ಕಂಡರೆ, ಅರಸ ಅವಳನ್ನು ಮದುವೆ ಆಗುವುದಾಗಿ ಹೇಳುವುದು, ತಂದೆ ಒಪ್ಪಿದರೆ, ತಾಯಿ ಮತ್ತು ಮಗಳು ಅದನ್ನು ಪ್ರತಿಭಟಿಸುವುದು ಕಾಣುತ್ತೇವೆ. ಬುದ್ಧಿವಂತರು, ಚತುರೆಯರು, ಸಾತ್ವಿಕರು, ಗುಣಶೀಲೆಯರು, ತ್ಯಾಗಮಯಿಗಳು, ಧರ್ಮದಯಿಗಳು ಹೀಗೆ ವಿವಿಧ ಬಗೆಯ ಸಂವೇದನೆಯುಳ್ಳ ಮಹಿಳೆಯರು ನಮ್ಮ ಕಣ್ಮುಂದೆ ಹಾದು ಹೋದಂತೆ ಕವಿ ಚಿತ್ರಿಸಿದ್ದಾನೆ.

ಹೀಗೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಾವಿರಾರು ಹೆಣ್ಣುಮಕ್ಕಳ ಪಾತ್ರಗಳು ವಿವಿಧ ಬಗೆಯಲ್ಲಿ ಕವಿಗಳು ವರ್ಣಿಸಿದ್ದಾರೆ. ಶ್ರೇಷ್ಠ, ಮಧ್ಯಮಾ, ಕನಿಷ್ಠ ಎಲ್ಲವರ್ಗದ ಸ್ತ್ರೀಪಾತ್ರಗಳನ್ನು ಕಾಣುತ್ತೇವೆ. ಅವುಗಳ ಸೌಂದರ್ಯ, ಗುಣಶೀಲತೆ, ಕಾರ್ಯಕ್ಷಮತೆ, ಪತಿವ್ರತಾಶಿರೋಮಣಿಗಳು, ವಾರಾಂಗಾನೆಯರು, ದಾಸಿಯರು ಮುಂತಾದ ಮನುಷ್ಯ ಸ್ವರೂಪದ ಸ್ವಭಾವಗಳನ್ನು ಸಚಿತ್ರವಾಗಿಸಿರುವುದು ಕವಿಗಳ ಹೆಚ್ಚುಗಾರಿಕೆಯಾಗಿದೆ. ಒಂದೊಂದು ಕಡೆ ಅತಿಯಾದ ರಂಜನೆಯ ವರ್ಣನೆ ಮಾಡಿರುವುದಿದೆ. ಸ್ತ್ರೀಪರ ಮತ್ತು ವಿರುದ್ಧವಾದ ಸಂಗತಿಗಳು ನುಸಳಿರುವುದಿದೆ. ಚರಿತ್ರೆಯ, ಪುರಾಣ, ಕಲ್ಪನೆಯ ಸ್ತ್ರೀಪಾತ್ರಗಳು ಕನ್ನಡ ಕಾವ್ಯಗಳಲ್ಲಿ ದಟ್ಟಣಿಸಿರುವುದು ಅದ್ಭುತ ರಮ್ಯವಾಗಿದೆ.

## ಆಕರ ಗ್ರಂಥಗಳು


1. ವಡ್ಡಾರಾಧನೆ (ಸಂ) ಟಿ.ಕೇಶವ ಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1999.
2. ಆದಿಪುರಾಣ (ಸಂ) ಕೆ.ಎಲ್.ನರಸಿಂಹಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1999.
3. ಪಂಪಭಾರತ (ಸಂ) ಎನ್.ಅನಂತರಂಗಾಚಾರ್ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1999.
4. ಶಾಂತಿಪುರಾಣ (ಸಂ) ಹಂಪ ನಾಗರಾಜಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1982
5. ಸಾಹಸಭೀಮ ವಿಜಯ (ಸಂ) ಆರ.ವಿ.ಕುಲಕರ್ಣೀ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1999.
6. ರನ್ನ ಸಂಪುಟ (ಸಂ) ಹಂಪ ನಾಗರಾಜಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006
7. ಧರ್ಮಾಮೃತ (ಸಂ) ಬಿ.ಬಿ.ಮಹೀಶವಾಡಿ, ಎಸ್.ಪಿ.ಪಾಟೀಲ, ಕನ್ನಡ ಅಧ್ಯಯನ ಪೀಠ, ಕ.ವಿ.ವಿ.ಧಾರವಾಡ, 1984
8. ನಯಸೇನ ಸಂಪುಟ (ಸಂ)ಪ್ರೊ. ಎಸ್.ಪಿ.ಪಾಟೀಲ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006
9. ನಾಗಚಂದ್ರ ಸಂಪುಟ (ಸಂ) ಡಾ.ಶಾಂತಿನಾಥ ದಿಬ್ಬದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.